TIGHT BINDING BOOK

TEXT FLY
WITHIN THE
BOOK ONLY

THE BOOK WAS
DRENCHED

UNIVERSAL
LIBRARY
OU_198248
UNIVERSAL
LIBRARY

ಶ್ರೀಃ

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ, ಉಡುಪಿ.

ಶ್ರೀ

# ಪುರಂದರದಾಸಾರ್ಯರ

## ಚರಿತ್ರೆ.

ಲೇಖಕ:—

**ಶ್ರೀಪಾದದಾಸ,** ಹಂಡೆ, ಶಿವಮೊಗ್ಗ.

→ ಪ್ರಥಮಾವೃತ್ತಿ. ←

ಶ್ರೀಕೃಷ್ಣಮುದ್ರಣಾಲಯ, ಉಡುಪಿ..

1925.

ಬೆಲೆ. ೬ ಆಣೆ.

(All Rights Reserved.)

ಶ್ರೀ

ಸಮಚರಣಸರೋಜಂ ಸಾಂದ್ರನೀಲಾಂಬುದಾಭಂ ।
ಜಘನನಿಹಿತಪಾಣಿಂ ಮಂಡನಂ ಮಂಡನಾನಾಂ ।
ತರುಣತುಲಸಿಮಾಲಾಕಂಧರಂ ಕಂಜನೇತ್ರಂ ।
ಸದಯಧವಲಹಾಸಂ ವಿಟ್ಠಲಂ ಚಿಂತಯಾಮಿ ॥

ಶ್ರೀಪುರಂದರದಾಸಾರ್ಯರು.

CHECKED. 195



Checked 1965

# ಮುನ್ನುಡಿ.

ಶ್ರೀಪುರಂದರದಾಸಾರ್ಯರ ಭಕ್ತರುಗಳಲ್ಲಿ ವಿಜ್ಞಾಪನೆ—

ನಮ್ಮ ಭರತಖಂಡದಲ್ಲಿ · ತತ್ರಾಪಿ ಕರ್ಣಾಟಕಭಾಷಾ ಪರಿಚಯಸ್ಥರಲ್ಲಿ **ಶ್ರೀಪುರಂದರದಾಸ**ರೆಂದರೆ ವಿಶೇಷತಃ ಪೂಜ್ಯಬುದ್ಧಿಯಿರುವುದು ಸರಿಯಷ್ಟೆ. ಇಂತಹ ಭಾರತಭೂಮಿರತ್ನಪ್ರಾಯರಾದವರಲ್ಲಿ ನಮ್ಮ ಕೃತಜ್ಞತೆಯನ್ನು ಸಮರ್ಪಿಸುವುದು ಅತ್ಯವಶ್ಯವಲ್ಲವೆ? ನಮ್ಮ ತನು ಮನ ಧನಗಳಿಂದಲೂ ಹತ್ತೆಂಟು ಜನ್ಮಗಳಲ್ಲಿ ಎಡೆಬಿಡದೆ ಸೇವಿಸಿದರೂ ಇವರ ಉಪಕಾರದಿಂದ ಋಣಮುಕ್ತರಾಗಲಾರೆವಾದರೂ, ದಾಸರವರ ಸೇವೆಯನ್ನು ಅವರವರ ಯೋಗ್ಯತೆ ಇರುವಷ್ಟಾದರೂ ಮಾಡತಕ್ಕದ್ದು ಮುಖ್ಯ ಧರ್ಮ. ಮತ್ತಾವ ವಿಧದಿಂದಲೂ ಸೇವಿಸಲು ಅಸಮರ್ಥರಾಗಲು ಹತ್ತು ಬೆರಳುಗಳನ್ನು ಜೋಡಿಸಿ, ಮನಃಪೂರ್ವಕವಾಗಿ ಪುರಂದರಗುರುಭ್ಯೋ ನಮಃ ಎಂದು ಇವರ ಸ್ಮರಣೆಮಾತ್ರದಿಂದಲಾದರೂ ಇವರ ದಯೆಗೆ ಪಾತ್ರರಾಗಲ ಯಾವ ಅಭ್ಯಂತರವೂ ಇಲ್ಲ. ಅಂತೆಯೇ, ಭಗೀರಥನ ತನ್ನ ಪಿತೃಗಳುದ್ಧಾರಕ್ಕಾಗಿ ಕರೆತಂದ ಗಂಗೆಯಲ್ಲಿಯೇ ತಮ್ಮವರಿಗಾಗಿ ಭಗೀರಥನು ಕರೆಯಿಸಿದ ಗಂಗೆಯೆಂದು ಬಿಟ್ಟುಬಿಡದೆ ಪುನಃ ಪುನಃ ಪ್ರತಿಯೊಬ್ಬರೂ ಅದೇ ಗಂಗೆಯಿಂದಲೇ ತಾವೂ ಹೇಗೆ ಅರ್ಘ್ಯಗಳನ್ನು ಕೊಡುತ್ತಾರೆಯೋ ಹಾಗೆಯೇ ಅಲ್ಪನಾದ ನನಗೆ ಮತ್ತಾವ ವಿಧದಿಂದಲೂ ದಾಸಾರ್ಯರ ಸೇವೆಯನ್ನು ಮಾಡುವ ಯೋಗ್ಯತೆ ಇಲ್ಲದ್ದರಿಂದ ಬುದ್ಧಿನಿಯಾಮಕನಾದ ಪರಮಾತ್ಮನಿಂದ ಪ್ರೇರಿತವಾದಷ್ಟು ಇವರ ಗುಣಕಥನರೂಪವಾದ ಸೇವೆಯನ್ನಾದರೂ ಮಾಡುವ ಉದ್ದೇಶ್ಯದಿಂದ ಇವರ ಚರಿತ್ರೆಯನ್ನು ವರ್ಣಿಸಿರುತ್ತೇನೆ. ಇವರಂತೆಯೇ ಭಕ್ತರಾದವರು ನಮ್ಮ ಕರ್ಣಾಟಕದಲ್ಲಿ ವಿಜಯದಾಸರೇ ಮೊದಲಾಗಿ ಅನೇಕರಿರುತ್ತಿದ್ದರು. ಸಾಮಾನ್ಯವಾಗಿ ಜನಸಮುದಾಯವಲ್ಲಿ ಪುರಂದರದಾಸರೊಬ್ಬರಲ್ಲದೆ ಮಿಕ್ಕುಳಿದವರಲ್ಲಿ ಎಷ್ಟೋ ಭಕ್ತರ

ಹೆಸರು ಕೂಡಾ ಗೊತ್ತಿಲ್ಲದವರನೇಕರಿರುವರು, ವಾಚಕರೇ! ದಯವಿಟ್ಟು ಯೋಚಿಸಿರಿ. ಇದಕ್ಕೆ ಕನ್ನಡಿಗರಾದ ನಮ್ಮ ಆಲಸ್ಯವೇ ಕಾರಣವಲ್ಲವೆ? ಪುರಂದರದಾಸಾರ್ಯರನ್ನೇ ಆದರ್ಶವಾಗಿಟ್ಟುಕೊಂಡು ಮಹಾರಾಷ್ಟ್ರದೇಶದಲ್ಲಿ ಭಕ್ತಿಮಾರ್ಗಾವಲಂಬಿಗಳಾದ ರಾಮದಾಸ ಸಮರ್ಥರು, ತುಕಾರಾಮ ಮುಂತಾದವರು ಅನೇಕರನ್ನು ಶಿಷ್ಯ ಪ್ರಶಿಷ್ಯರನ್ನಾಗಿ ಮಾಡಿಕೊಂಡರು. ಮಹಾರಾಷ್ಟ್ರದೇಶದಲ್ಲಿರುತ್ತಿದ್ದ ಭಕ್ತರುಗಳ ಚರಿತ್ರೆಗಳೆಲ್ಲಾ ಜನಗಳಲ್ಲಿ ಪ್ರಚುರವಾಗುವಂತೆ ಮಹಾರಾಷ್ಟ್ರದೇಶೀಯರು ಭಕ್ತವಿಜಯವೆಂಬುವ ಪುಸ್ತಕವನ್ನು ಬರೆದು ತಿಳುವಳಿಕೆಗೆ ತಂದಿರುತ್ತಾರೆ. ಹೀಗಿರುವಾಗ ಎಷ್ಟೋ ಮೊದಲೇ ಇರುತ್ತಿದ್ದ ಕರ್ಣಾಟಕ ಭಕ್ತರುಗಳ ಚರಿತ್ರೆಯು ಜನಸಮೂಹದಲ್ಲಿ ಪ್ರಚುರಪಡಿಸಲು ಇನ್ನಾದರೂ ಜಾಗ್ರತರಾಗಬೇಡವೆ? ದಾಸಾರ್ಯರ ಚರಿತ್ರೆಯಲ್ಲಿ ನನಗೆ ತಿಳಿದುಬಂದ ವಿಷಯಗಳಲ್ಲಿ ಏನಾದರೂ ವ್ಯತ್ಯಾಸವಿದ್ದರಾಗಲೀ, ಮತ್ತಾವ ದೋಷವಿದ್ದರಾಗಲೀ, ಪ್ರಾಜ್ಞರಾದವರು ಅಂತಃಕರಣದಿಂದ ತಿಳಿಸಿದಲ್ಲಿ ಶಿರಸಾವಮಾನ್ಯಮಾಡಿ ಮುಂದಿನ ಮುದ್ರಣದಲ್ಲಿ ಸರಿಪಡಿಸುತ್ತೇನೆ. ಪ್ರಕೃತ ಗುಣಜ್ಞರಾದವರು ದಾಸಾರ್ಯರ ಪವಿತ್ರ ಚರಿತ್ರೆ ಎಂಬುವ ಅಭಿಮಾನದಿಂದ ಸಾಭಿಮಾನ ಮಾಡಬೇಕಾಗಿಯೂ ಮಿಕ್ಕುಳಿದವರ ಚರಿತ್ರೆಯನ್ನು ಬರೆಯಬೇಕೆಂಬ ಉದ್ದೇಶ್ಯವಿರುವುದರಿಂದ ಪ್ರೋತ್ಸಾಹ ಕೊಡಬೇಕಾಗಿಯೂ ಪ್ರಾರ್ಥಿಸುವ,

ಕ್ರೋಧನ ಸಂ। ಕಾರ್ತಿಕ
ಶು. ೧೧ ಬುಧವಾರ.

ದಾಸಾರ್ಯರ ಭಕ್ತರ ಚರಣ ದಾಸ,
**ಶ್ರೀಪಾದದಾಸ,** ಹಂಡೆ, ಶಿವಮೊಗ್ಗಾ.

## ಸಮರ್ಪಣ.

ಶ್ರೀವೇದವ್ಯಾಸ, ಭೂವರಾಹ, ಹಯಗ್ರೀವಾದಿ ದೇವಪಾದಪದ್ಮಾರಾಧಕ ಶ್ರೀಮದ್ಭಾವಿಸಮೀರ ಶ್ರೀಮದ್ವಾದಿರಾಜ ಪದಾಧಿರೂಢ ಶ್ರೀಮದ್ವೃಂದಾವನಾಚಾರ್ಯ ಶುಭಸಂಪ್ರದಾಯ ಪ್ರವರ್ತಕ ಶ್ರೀಮದ್ವಿಶ್ವಾಧೀಶ ತೀರ್ಥಕರಕಂಜಸಂಜಾತ ಶ್ರೀಮದ್ವಿಶ್ವೇಂದ್ರತೀರ್ಥ ಶ್ರೀಪಾದಂಗಳವರ ಮಹದಾಜ್ಞಾಬಲದಿಂದ ರಚಿಸಿದ ಈ ಚರಿತ್ರೆಯನ್ನು ಶ್ರೀಗುರುರಾಜರ ಚರಣಕಮಲಗಳಲ್ಲಿ ಸಮರ್ಪಿಸಿರುತ್ತೇನೆ.

*

ಶ್ರೀಃ

ಶ್ರೀಗುರುರಾಜೋ ವಿಜಯತೇ

ಶ್ರೀಪಾಂಡುರಂಗವಿಟ್ಠಲಃ ಪ್ರಸನ್ನಃ

# ಪುರಂದರದಾಸಾರ್ಯರ ಚರಿತ್ರೆ.

ಮನ್ಮನೋಽಭೀಷ್ಟವರದಂ ಸರ್ವಾಭೀಷ್ಟಫಲಪ್ರದಮ್ ।
ಪುರಂದರಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಮ್ ॥

## ಶ್ರೀಪುರಂದರದಾಸಾರ್ಯರಪ್ರಿಯ ಶಿಷ್ಯರಾದ ವಿಜಯರಾಯರ ಕೃತ ದಾಸಾರ್ಯರ ಸ್ತೋತ್ರ.

### ರಾಗ ಪೂರ್ವಿ, ಝಂಪೆತಾಳ.

ಬ್ಯಾಸಾರಾಡೆ ಭಜಿಸಿರೊ ಪುರಂದರ | ದಾಸರಾಯರಾ || ಪಲ್ಲ || ಶ್ರೀಶ ನಿಮ್ಮನು | ದಾಸಿನಮಾಡದೆ | ಪೋಷಿಸುವ ಸಂ | ತೋಷಾದಿಂದ || ಅನುಪಲ್ಲ || ಪುರಂದಾರಘಡದ ಒಳಗೆ | ಹಿರಿಯ ಸಾಹೂಕಾರನೆನಿಸೀ | ಪರಿಪರೀ ಸೌಖ್ಯಗಳ ಸುರಿಸುತ್ತಾ || ಇರುತಿರಲು ನರಹರಿ | ತ್ವರಿತದಿಂ ಬ್ರಾಹ್ಮಣನಾಗುತ್ತಾ || ಕಾರುಣ್ಯಾದಿಂದು | ದ್ಧರಿಸಲೋಸುಗ ಮನೆಗೆ ಪೋಗುತ್ತಾ || ಯಜಮಾನ ಕಂಡೂ | ಹೊರಗೆ ಹಾಕಲು | ಮರುದಿವಸ ಮತ್ತ್ಹೋಗಿ ನಿಂತಾ || || ೧ || ಬಾರಿ ಬಾರಿಗು ಸಾಹುಕಾರನ | ಮೋರೆಗ್ಹತ್ತೀ ಮೇರೆಯಿಲ್ಲದೆ | ಆರು ತಿಂಗಳು ಬೆನ್ನ ಬೀಳುತ್ತಾ || ನಾಯಕರು ಈತನ | ದಾರು ಬಿಡುತಾರೆಂದು ಬೈವುತ್ತಾ || ಬ್ಯಾಸತ್ತು ಎರಡೂ | ಹೇರು ರೊಕ್ಕಾಮುಂದೆ ಸುರಿಸುತ್ತಾ || ಇದರೊಳೊಂದು | ಡ್ಬಾರಿಸಿಕೋ ಎನಲು ನಾರಾಯಣ ಬಟ್ಹೋದ ನಗುತಾ || ೨ || ಪಿತ್ತಲಾಬಾಗಿಲಲಿ ಹೋಗೀ | ಮತ್ತೆ ಆತನ

ಮಡದಿಗಾಗೀ | ಹತ್ತಿ ಬಿದ್ದನು | ವಿತ್ತತಾಯೆನುತಾ || ತಾಮಗನ ಮುಂಚೆಂ |
ದತ್ಯಧಿಕದಿಂ ಬಾಯತೆರೆಯುತ್ತಾ || ಆ ಪ್ರಾಣೆನುಡಿದಳು | ಯತ್ತಣಾ ದ್ರವ್ಯಾ
ವೃತನಗೆನುತಾ || ನಿನಮೂಗಿನಾಗಿನ | ಮುತ್ತಿನಾ ಮೂಗುತಿಯ ತಾರೆನೆ |
ಉತ್ತಮಳ್ ತೆಗದಿತ್ತಳ್ ತ್ವರಿತಾ || ೩ || ಜೋಕೆಯಿಂದಲಿ ಮೂಕು
ತ್ರ್ಯೈದೂ | ಆಕೆ ಗಂಡನ ಕಣ್ಣಿಗೇತಾ | ಹಾಕಿದಾನೂ ಪಾಕಿ ಕೊಡು ಎನು
ತಾ || ಅದು ಕಂಡು ಇದು ನ | ಮ್ಮಾಕೆದೆಂದೂ ಆತ ನುಡಿಯುತ್ತಾ || ಸೇವ
ಕರು ಇಂಥಾ | ದ್ಯಾಕೆ ಇರಬಾರಾದು ಎನ್ನುತ್ತಾ || ನಿಜ ಪೇಳು ಎನ್ನಲು |
ನಾಲ್ಕು ನೂರೂ ಪಾಕಿ ಕೊಡು ಎಂ | ದ್ಹಾಕಿ ಬಾರದೆ ತಿರುಗಿ ಹೋದಾ || ೪ ||
ತಿರುಗಿ ಬ್ರಾಹ್ಮಣ ಬರದಿರಾಲು | ಕರೆದ ತನ್ನಾ ಹೆಂಡತಿಯಾ | ಬರಿಯ
ನಾಸಿಕವನ್ನೆ ಕಂಡಾನೂ || ಆಭರಣವೆಲ್ಲಿಸೆ | ಮುರಿದುದೆಂದು ಪೇಳಿದಳು
ಆಕಿನ್ನೂ || ತೋರಾದೆ ಇದ್ದರೆ | ಅರಿವೆ ನಿನ್ನಾ ಜೀವವೆಂದಾನೂ || ವಿಷಕೊಂ
ಬೆನೆಂದೂ | ಕರದಿ ಬಟ್ಟಲಿ ಧರಿಸಲಾಕ್ಷಣ | ತೊರದಿ ನರಹರಿ ಆದರೊಳಿ
ತ್ತನು || ೫ || ಹರುಷದಿಂದಲಿ ಒಡವೆ ಪೈಡೂ | ಪುರುಷನಾ ಕೈಯಲ್ಲಿ ಕೊ
ಡಲೂ | ತರಿಸೆ ತನ್ನಲ್ಲಿದ್ದ ಒಡವೆಯಾ || ಕಾಣಾದೆ ಅರೆ ಚಿರ | ಗಾಗಿ ಕೇಳೀ
ದಾನು ಮಡದಿಯಾ || ನಿಜ ಪೇಳು ಎನ್ನಲು | ಅರಸಿನುಡಿದಳು ಕೊಟ್ಟ ಸುದ್ದೀ
ಯಾ || ಅಭಿಮಾನಕಂಜೀ | ಅರೆದು ವಿಷವಾ ಕುಡಿಸೆನೆಂಬೆನೆ | ತಿರಿರಮಣ
ಕೊಟ್ಟದ್ದು ಖರೆಯಾ || ೬ || ದೇವರಾಯನು ತನ್ನ ಮನದಾ | ಭಾವವನ್ನೂ
ತಿಳಿಯಬೇಕೆಂದು | ಕೇವಲಾ ಬ್ರಾಹ್ಮಣನಾಗಿದ್ದಾ || ಪರಿಪಕ್ವ ನಮಗಿ | ಸ್ನಾವ
ಕಾಲಕೆ ಆಗಬೇಕೆಂದಾ || ವೈರಾಗ್ಯಭಾಗ್ಯದಿ | ಜೀವಿಸೀ ಕೊಂಡಿಪ್ಪುದೇ
ಚಂದಾ || ಹೀಂಗೆನುತ ಮನೆ ಧನ | ಕೋವಿದರ ಕರೆದಿತ್ತು ಪುರುಷದಿ |
ಕಾಮನಯ್ಯನ ದಾಸನಾದಾ || ೭ || ಲಕ್ಷ್ಮೀಪತಿಯಾ ಪಾದದಲ್ಲೀ | ಲಕ್ಷ್ಯ
ಯಿಟ್ಟೂ ವ್ಯಾಸರಾಯರ | ಶಿಕ್ಷೆಯಿಂದಂಕಿತವ ಕೊಳ್ಳುತ್ತಾ || (ತಾಪಾಣ
ಪಾಂಚಿ) ಪದತೊರಾದ್ಯೈದೂ | ಲಕ್ಷ ಪದ ಸುಳಾದಿ ಪೇಳುತ್ತಾ || ಪ್ರತಿ
ದಿವಸದಲ್ಲೂ | ಪಕ್ಷಿವಾಹನನಾಟ್ಯವಾಡುತ್ತಾ || ಅಪರೋಕ್ಷ ಜ್ಞಾನಿಯ |
ಮೋಕ್ಷ ಸ್ಥಾನಕೆ ಕರೆದು ಒಯ್ದನ | ಧೋಕ್ಷಜನು ತಾ ಬೆನ್ನ ಬಿಡದೇ || ೮ ||
ಘೋರ ನರಕಾದೊಳಗೆ ಬಿದ್ದಾ | ಪಾಠ ಜನರೂ ಬೇರುತಿರಲು | ದ್ಧಾರ
ಮಾಡಿದ | ನಾರದಾರಿವರೂ || ಪಾಮರರ ಪಾಲಿಸೆ | ಧಾರುಣಿಯೊಳವತಾರವಾ

ಡಿದರೂ || ಹರಿ ಸರ್ವೋತ್ತಮನೆಂ | ದ್ವಾರಂತೆ ಧರೆಯೊಳಗೆ ಬೀರಿದರೂ || ಹೀಂಗೆನುತ ತಿಳಿಯಲು | ಮಾರಜನಕಾ ವಿಜಯವಿಟ್ಠಲ | ಯಾರಿಗಾದರು ಒಲಿವ ಕಾಣಿರೋ || ೯ ||

## ಪೂರ್ವರಂಗ.

ಅಹೋ ಬತ್ಯೈಷಾಂ ಕಿಮಕಾರಿ ಶೋಭನಂ ಪ್ರಸನ್ನ ಏಷಾಂ ಕಿಮುತ ಸ್ವಯಂ ಹರಿಃ ।
ಯೈರ್ಜನ್ಮ ಲಬ್ಧಂ ನೃಷು ಭಾರತಾಂಗಣೇ ಮುಕುಂದಸೇವೌಪಯಿಕಂ ಸ್ಪೃಹಾತ್ಮನಾವಸ್॥
[ಭಾಗವತ]

ದೇವತೆಗಳೂ ಕೂಡ ಪುಣ್ಯಭೂಮಿಯಾದ ಭರತ ಭೂಮಿಯಲ್ಲಿ, ತತ್ರಾಪಿ ಕಲಿಯುಗದಲ್ಲಿ, ಮನುಷ್ಯತ್ವೇನ ಜನ್ಮಗ್ರಹಣ ಮಾಡುವಂತೆ, ಅನುಗ್ರಹಿಸಬೇಕಾಗಿ ಶ್ರೀಹರಿಯನ್ನು ಪ್ರಾರ್ಥಿಸುವರು. ಏತಕ್ಕೆಂದರೆ: —ಕೃತ ತ್ರೇತಾ ದ್ವಾಪರಯುಗಗಳಲ್ಲ ಭಗವದನುಗ್ರಹಕ್ಕೆ ಪಾತ್ರರಾಗಬೇಕಾದರೆ ಅನೇಕ ಸಹಸ್ರಾರು ವರುಷಗಳ ಕಾಲ ಧ್ಯಾನ, ಯಜ್ಞ, ದೇವತಾರ್ಚನೆಗಳೇ ಮೊದಲಾದ ರೂಪಗಳಿಂದ ಸೇವಿಸಬೇಕು. ಕಲಿಯುಗದಲ್ಲಿ ನಾಮಸ್ಮರಣೆಮಾತ್ರದಿಂದ ಬಹು ಸುಲಭವಾಗಿ ಜಾಗ್ರತೆಯಾಗಿ ಶ್ರೀಹರಿಯನ್ನು ಮೆಚ್ಚಿಸಬಹುದೆಂಬುದರಿಂದ.

ಹೀಗಿರುವಾಗಲೂ ನಮ್ಮ ಆರ್ಯರು ಹೇಗಿದ್ದರು? ನಾವು ಯಾರು? ನಮ್ಮ ಜನ್ಮದ ಕರ್ತವ್ಯವೇನು? ನಾವು ವಾಸಿಸುವ ಭೂಮಿಯು ಎಂತಹದು? ಇದಾವುದರ ಕಡೆಗೂ ಲಕ್ಷ್ಯಕೊಡದೆ, ಅಪ್ರಾರ್ಥಿತವಾಗಿ ಶ್ರೇಷ್ಠವಾದ ಪುಣ್ಯಭೂಮಿಯಲ್ಲಿ ಸುಲಭ ಮಾರ್ಗದಿಂದ ಭಗವದನುಗ್ರಹವನ್ನು ಸಂಪಾದಿಸಲು ಅನುಕೂಲವಾದ ಕಲಿಯುಗದಲ್ಲಿ ಸಾಧನ ದೇಹವಾದ ಮನುಷ್ಯದೇಹವನ್ನು ಶ್ರೀಹರಿಯು ಅನುಗ್ರಹಪೂರ್ವಕವಾಗಿ ಕರುಣಿಸಿರುವಾಗಲೂ, ಆತ್ಮಶ್ರೇಯಸ್ಸಿನ ಮಾರ್ಗವನ್ನೇ ಮರೆತು ಕರ್ತವ್ಯಪರಾಙ್ಮುಖರಾಗುತ್ತಾ ಅಲಭ್ಯಲಭ್ಯವಾದ ಉತ್ತಮ ದೇಹವನ್ನು ಅಡವಿಯಲ್ಲಿ ಹುಟ್ಟಿ ಬೆಳೆದು ಬಿದ್ದುಹೋಗುವ ಕಾಡು ಮರದಂತೆ ವ್ಯರ್ಥಗೊಳಿಸದೆ ಜಾಗ್ರತರಾಗಬೇಡವೆ?

ಕಳೆದು ಹೋದ ದಿವಸ ಹೋಯಿತು, ಉಳಿದ ದಿವಸಗಳನ್ನಾದರೂ ಭಗವದನುಗ್ರಹ ಉಂಟಾಗುವ ಸನ್ಮಾರ್ಗದಲ್ಲಿ ಸಾರ್ಥಕಗೊಳಿಸಿದರಲ್ಲವೆ ನಾವು ಧನ್ಯರಾಗುವೆವು.

ಹಾಗಾದರೆ ಅಂತಹ ಸುಲಭ ಮಾರ್ಗವಾವುದು? ಮಾರ್ಗದರ್ಶಕರು ಯಾರು? ಅವರ ಚರಿತ್ರೆಯೆಂತಹದು? ಎಂಬೀ ವಿಚಾರಗಳನ್ನು ತಿಳಿದುಕೊಂಡ ರಲ್ಲವೆ ನಮಗೆಅವರ ಮಾಹಾತ್ಮ್ಯೆಯು ತಿಳಿದು, ಮೊಟ್ಟಮೊದಲು ಅವರಲ್ಲಿ ಪೂಜ್ಯಬುದ್ಧಿ ಹುಟ್ಟಿ, ನಂತರ ಅವರ ಮುಖದಿಂದ ಬಂದಿರತಕ್ಕ ಮಾತಿನಲ್ಲಿ ನಂಬುಗೆಯುಂಟಾದರಲ್ಲವೆ ಅವರು ತೋರಿಸಿರುವ ಮಾರ್ಗವನ್ನನುಸರಿಸಿ ಭಗವದನುಗ್ರಹಕ್ಕೆ ಕಾರಣರಾಗಲವಕಾಶವಾಗುವುದು. ಅಂದ ಮೇಲೆ ಸಾವಕಾಶವೇಕೆ? ಆ ಭಾಗವತೋತ್ತಮರ ಚರಿತ್ರೆಯನ್ನು ತಿಳಿದುಕೊಳ್ಳಲು ಮುಂದೆಸಾಗುವ.

## ಶುಭಸೂಚನೆ.

ಈ ಯುಗದಲ್ಲಿ ಬರಬರುತ್ತಾ ಇಂದ್ರಿಯನಿಗ್ರಹಶಕ್ತಿಯು ಬಹುಮಟ್ಟಿಗೆ ಕಡಿಮೆಯಾಗುತ್ತಾ ಬಂದಹಾಗೆಲ್ಲಾ ಜನಗಳಲ್ಲಿ ಆಯುಸ್ಸು, ಐಕಮತ್ಯ, ಮನಸ್ಥೈರ್ಯತೆ, ಧರ್ಮಶ್ರದ್ಧೆಗಳೆಲ್ಲವೂ ಕಾಂತವಾಗುತ್ತ ಯಾವ ರೂಪದಿಂದಲೂ ದೇವತೆಗಳಿಗೆ ತೃಪ್ತಿಯುಂಟಾಗುವ ಸತ್ಕಾರ್ಯಗಳಾಚರಣೆಯೇ ಕಡಿಮೆಯಾಗುತ್ತಿದೆ.

ಹೀಗಿದ್ದರೂ ಒಂದು ಕಾಲದಲ್ಲಿ ನಮ್ಮಾರ್ಯರಿಂದ ಪೂಜೆಸಿಕೊಂಡು ತೃಪ್ತರಾದ ದೇವತೆಗಳು ನಮ್ಮ, ಅಂದರೆ:—ಕಲಿಯುಗದವರ ಮೇಲೆ ಅಭಿಮಾನದಿಂದ, ಕಾಲನಿಯಮಗಳಿಗೊಳಪಟ್ಟವರಾಗಿ, ಸಾರ್ಥಕವಾದ ಮಾನುಷ್ಯದೇಹದಿಂದ ಸಾಧನೆಮಾಡಿಕೊಳ್ಳದೆ ವ್ಯರ್ಥಪಡಿಸುತ್ತಾರೆಂಬ ಪಶ್ಚಾತ್ತಾಪದಿಂದ ನಮ್ಮ ಉದ್ಧಾರಕ್ಕಾಗಿ ಶ್ರೀಹರಿಯನ್ನು ಪ್ರಾರ್ಥಿಸಿದರು.

'ಭಗವಂತನೇ! ಕಲಿಯುಗದವರ ಉದ್ಧಾರಕ್ಕಾಗಿ ಯಾವುದಾದರೊಂದು ಸುಲಭರೂಪದಿಂದ ನಿನ್ನನ್ನು ಪೂಜಿಸುವ ಮಾರ್ಗವನ್ನು ಕಲ್ಪಿಸಿ ಕೊಡು' ಎಂಬುದಾಗಿ ಪ್ರಾರ್ಥಿಸಿದ ದೇವತೆಗಳ ಪ್ರಾರ್ಥನೆಯನ್ನು ಕೇಳಿದ ಶ್ರೀಹರಿಯು ಕರುಣಾಸಾಗರನಾದುದರಿಂದ ಶ್ರೀನಾರದರಿಗೆ ಭೂಮಿಯಲ್ಲವತರಿಸಿ ಮಾರ್ಗದರ್ಶಕರಾಗುವಂತೆ ಆಜ್ಞಾಪಿಸಿದನು. *

---

* ನಾರದರಿಗಿಂತಲೂ ವಿಶೇಷ ಜ್ಞಾನಿಶ್ರೇಷ್ಠರಾದ ಅನೇಕರಿರುತ್ತಿದ್ದರೂ ಎಲ್ಲರನ್ನೂ ಬಿಟ್ಟು ನಾರದರಿಗೇ ಈ ಆಜ್ಞೆಯನ್ನು ಕೊಡಲು ಕಾರಣವೇನೆಂಬ ವಿಷಯದಲ್ಲಿ, ನನಗೆ ದೇವರು ಪ್ರೇರಿಸುವ ಯುಕ್ತ್ಯರ್ಥವನ್ನು ವಾಚಕರ ಮುಂದಿರಿಸುತ್ತೇನೆ. ಎಂತಹ

# ವರದಪ್ಪನವರು.

ಸೋಲಾಪುರ ಜಿಲ್ಲಾ, ಪಂಢರಾಪುರ ತಾಲ್ಲೂಕು, ಪುರಂದರಘಡವೆಂಬುವ ಗ್ರಾಮದಲ್ಲಿ ವರದಪ್ಪನೆಂಬ ದೇಶಸ್ಥಬ್ರಾಹ್ಮಣನಿದ್ದನು. ಐಶ್ವರ್ಯವಂತನಾಗಿದ್ದರೂ, ತಾನು ಅಪುತ್ರನೆಂಬುವ ವ್ಯಥೆಗೀಡಾಗಿದ್ದನು. ಈತನು ತನ್ನನ್ನು ಪುನ್ನಾಮನರಕದಿಂದ ದಾಟಿಸುವ ಸುಪುತ್ರವಂತನನ್ನಾಗಿ ಮಾಡಿ ಕಾಪಾಡುವಂತೆ ತನ್ನ ಸತಿಯೊಂದಿಗೆ ರಾತ್ರಿ ಹಗಲೊಂದಾಗಿ ಹನ್ನೆರಡು ವರ್ಷಗಳ ಕಾಲ ಏಕಪ್ರಕಾರ ತಿರುಪತಿ ಶ್ರೀನಿವಾಸನನ್ನು ಸೇವಿಸಿದನು.

ಈ ಸತಿಪತಿಗಳ ಭಕ್ತಿಗೆ ಸಂತುಷ್ಟನಾದ ಶ್ರೀನಿವಾಸನು ಇವರಿಗೆ ಪುತ್ರೋತ್ಸವವಾಗುವಂತೆ ಅನುಗ್ರಹಿಸಲು ಸಂಕಲ್ಪಿಸಿದನು. ತನ್ನ ಭಕ್ತವರ್ಗದಲ್ಲಿ ಸೇರಿದವರಾಗಿರುವ ಇವರಲ್ಲಿ, ತನ್ನ ಸೇವೆಯ ಫಲರೂಪನಾದ ಪುತ್ರನು ಸಾಮಾನ್ಯನಾಗಿರದೆ, ಅಸಾಧಾರಣಕೀರ್ತಿವಂತನಾಗಿಯೂ, ಇವರನ್ನು ಪುನ್ನಾಮನರಕದಿಂದ ದಾಟಿಸಲು ಶಕ್ತನಾಗಿಯೂ, ತನ್ನ ಭಕ್ತನಾಗಿಯೂ ಇರಲು ಯೋಗ್ಯನಾದವನಾಗಿರಬೇಕೆಂದು ಯೋಚಿಸಿ, ಪೂರ್ವದಲ್ಲಿ ಭೂಲೋಕದಲ್ಲಿ ಮನುಷ್ಯತ್ವೇನ ಜನ್ಮಗ್ರಹಣಮಾಡಲು ಆಜ್ಞೆಯಿತ್ತ ನಾರದರ* ಇಲ್ಲಿ ಪುತ್ರರೂಪದಿಂದ ಅವತರಿಸುವಂತೆ ಅಂತಃಪ್ರೇರಕನಾಗಿ ಪ್ರೇರಿಸಿದನು.

ಶ್ರೀಹರಿಯು ಪ್ರೇರಣೆಯಂತೆ, ನಾರದರೇ ವರದಪ್ಪನಾಯಕರಲ್ಲಿ ಅವತರಿಸಿದರು. ‡

---

ರನ್ನೇ ಆಗಲಿ ತಮ್ಮ ಮಾತಿನಲ್ಲಿ ವಿಶ್ವಾಸ ಉಂಟಾಗುವಂತೆ ಮಾಡಿಕೊಳ್ಳುವ ಒಂದು ಪೂರ್ವವಾದ ಶಕ್ತಿಯು ಈ ನಾರದರಲ್ಲಿದ್ದಿತು. ಮಿಕ್ಕುಳಿದವರ ಮಾತಂತಿರಲಿ. ಮಹಾ ಕ್ರೂರಿಗಳಾದ ರಾಕ್ಷಸರುಗಳು ಕೂಡಾ ಒಂದು ಬಾರಿ ನಾರದರ ಮಾತು ಕೇಳಿ ತಾವು ಮೋಸಹೋದೆವೆಂದು ತಿಳಿದರೂ, ಪುನಃ ಅವರ ಮನಸ್ಸನ್ನು ವಶಪಡಿಸಿಕೊಳ್ಳುವಂತೆ ಇವರು ಮಾತನಾಡುತ್ತಿದ್ದರೆಂಬುದು ಅನೇಕ ಕಥೆಗಳಿಂದ ತಿಳಿಯಬರುತ್ತದೆ ಅಂದಮೇಲೆ ಲೋಕ ಹಿತಕ್ಕಾಗಿ ಹೇಳುವ ಇವರ ಮಾತಿನಲ್ಲಿ ಶ್ರದ್ಧೆಯುಂಟಾಗುವುದೆಂದರೇನು ಅತಿಶಯವಲ್ಲ ಆದುದರಿಂದಲೇ ಚಿತ್ತಾಕರ್ಷಣದಾಯಕವಾದ ವಾಕ್ಸರಣಿಯ ಶಕ್ತಿಯುಳ್ಳ ಇವರ ಮುಖದಿಂದಲೇ ಈ ಮಹತ್ಕಾರ್ಯಸಾಧನವನ್ನು ಮಾಡಿಸಲು ಆಜ್ಞಾಪಿಸಿರಬಹುದೆಂದು ಊಹಿಸಬಹುದು.

‡ ಪುರಂದರದಾಸರ ಅವತಾರಕಾಲ ಕ್ರಿಸ್ತಶಕ ೧೬ನೆಯ ಶತಮಾನ.

## ಸಂಸಾರಬಂಧ.

ಪುತ್ರೋತ್ಸವವಾದ ಆ ದಿವಸದ ಸಂತೋಷವೇ ಸಂತೋಷ. ಸಂತೋಷವಾಗುವುದೊಂದತಿಶಯವೇನು? ಬಹು ಕಾಲ ಪುತ್ರರಿಲ್ಲದೆ ವೃದ್ಧಾಪ್ಯದಲ್ಲಿ ಪುತ್ರಲಾಭವಾದವರು ಮಾತ್ರ ಈ ಸಂತೋಷ ಸುಖವನ್ನು ಬಲ್ಲರು. ಆದರೆ ಇಂತಹ ಅತಿಶಯ ಸಂತೋಷ ಕಾಲದಲ್ಲಿಯೂ, ವರದಪ್ಪನಾಯಕರೇ ಆಗಲಿ, ಅವರ ಪತ್ನಿಯರೇ ಆಗಲಿ, ಶ್ರೀದೇವರನ್ನು ಮಾತ್ರ ಮರೆಯದೆ ಯಾವ ಸ್ವಾಮಿಯ ಸೇವೆಯಿಂದ ಲಭಿಸಿದ ವರಪುತ್ರನೋ, ಆತನನ್ನು ಆ ಸ್ವಾಮಿಯ ಹೆಸರಿನಿಂದಲೇ ಕರೆಯಬೇಕೆಂದು ಯೋಚಿಸಿ, ಈ ನೆಪದಿಂದ ಕ್ಷಣೇಕ್ಷಣೇ ತಮ್ಮ ಕುಲಸ್ವಾಮಿಯ ನೆನಪು ತಂದುಕೊಳ್ಳುವ ಉದ್ದೇಶ್ಯದಿಂದ ಪುತ್ರನಿಗೆ ಶ್ರೀನಿವಾಸನೆಂದೇ ನಾಮಕರಣಮಾಡಿದರು.

ಪುತ್ರನು ದಿನೇದಿನೇ ವೃದ್ಧಿಯಾಗುತ್ತ ಬಂದನು. ಸರಿಯಾದ ಕಾಲದಲ್ಲಿ ವಿದ್ಯಾರಂಭಮಾಡಿಸಿದರು. ಪುತ್ರನು ಸಂಸ್ಕೃತ, ಸಂಗೀತ, ಪ್ರಾಕೃತ ವಿದ್ಯೆಗಳಲ್ಲಿ ಪಾರಂಗತನಾದುದುದನ್ನು ಕಂಡು ಸಂತೋಷದಿಂದ ಹಿಗ್ಗುತ್ತಿದ್ದರು. ಸಕಾಲದಲ್ಲಿ ಉಪನಯನಾದಿ ಮಂಗಲಕಾರ್ಯಗಳನ್ನು ನೆರವೇರಿಸಿ, ಯೋಗ್ಯಳಾದ ಕನ್ಯೆಯನ್ನು ತಂದು ವಿವಾಹಮಾಡಿದರು. ಶ್ರೀನಿವಾಸನಾಯಕರ ಪತ್ನಿಯ ಹೆಸರು ಸರಸ್ವತೀಬಾಯಿ. ಪತಿಸೇವಾಪರಾಯಣೆಯಾದ ಸತ್ಕುಲಪ್ರಸೂತಳಾದ ಪತ್ನಿಯಿಂದ ಕೂಡಿದ ನಾಯಕರ ಭಾಗ್ಯವೇ ಭಾಗ್ಯ.

ನಾಯಕರು ಮೇಲೆ ಹೇಳಿದ ವಿದ್ಯೆಗಳಲ್ಲಲ್ಲದೆ ರತ್ನಪರೀಕ್ಷೆಯಲ್ಲಿ ನಿಪುಣರಾಗಿ ವಿಜಯನಗರ ಬಿಜಾಪುರ ಗುಲ್ಬರ್ಗ ಮೊದಲಾದ ರಾಜರುಗಳಲ್ಲಿ ಮಾನ್ಯರಾದ ವರ್ತಕರಾಗಿದ್ದರು.

ಈ ಮಧ್ಯಕಾಲದಲ್ಲಿ ಶ್ರೀನಿವಾಸನಾಯಕರ ಮಾತಾಪಿತೃಗಳು ದಿವ್ಯಲೋಕವನ್ನು ಕುರಿತು ಪ್ರಯಾಣಮಾಡಿದರು.

ನಾಯಕರು ಈಗ ಸ್ವತಂತ್ರರಾದರು. ತಮ್ಮ ಕುಲಕ್ರಮಾಗತವಾಗಿ ಬಂದ ರತ್ನಪಡೀ ವ್ಯಾಪಾರ ನಿರತರಾದರು. ವ್ಯಾಪಾರವು ಕೈಗೂಡುತ್ತಾ ಬಂದಿತು. ಆಗರ್ಭಶ್ರೀಮಂತರಾದಿವರು ಇನ್ನೂ ಧನದಾಸೆಯು ಬಿಡದೆ, ಅಹರ್ನಿಶಿಯಲ್ಲಿಯೂ ದ್ರವ್ಯಾರ್ಜನೆಯ ಒಂದೇ ಕಾರ್ಯನಿರತರಾಗಿ ಪುಷ್ಕಳ

ದ್ರವ್ಯಸಂಗ್ರಹ ಮಾಡಿದರು. § ನವಕೋಟಿನಾರಾಯಣನೆಂಬ ಬಿರುದಿನಿಂದ ಹೊಗಳಿಸಿಕೊಳ್ಳುತ್ತಿದ್ದರು. ನಾಯಕರಿಗೆ ನಾಲ್ಕು ಜನ ಗಂಡುಮಕ್ಕಳೂ ಆದರು. ಆದರೆ, ನಾಯಕರಿಗೆ ದ್ರವ್ಯವು ಹೆಚ್ಚಿದಹಾಗೆಲ್ಲಾ ಲೋಭವು ಹೆಚ್ಚುತ್ತಾ ಬಂದಿತು. ಬಹುಶಃ ಲೋಕದಲ್ಲಿ ಐಶ್ವರ್ಯ ಔದಾರ್ಯಗಳೆರಡೂ ಒಂದೇ ಕಡೆಯಲ್ಲಿ ಸೇರುವುದು ಅಸಂಭವ, ಲೋಭಿಗಳಾದುದು ಮಾತ್ರವಲ್ಲದೆ, ಭೂತದಯೆ, ಭಗವದ್ಭಕ್ತಿ, ಇಹ, ಪರಗಳ ಯೋಚನೆಯೇ ಇಲ್ಲದೆ, ಶುದ್ಧ ನಾಸ್ತಿಕರಾದರು.

ಏಕೈಕಮಪ್ಯನರ್ಥಾಯ—ಎಂದು ಮನುಷ್ಯನ ಅಂಧಕಾರಕ್ಕೆ ಒಂದೊಂದೇ ಸಾಕಾಗಿದೆ. ಹೀಗಿರುವಾಗ ಇಲ್ಲಿಯೋ, ಎಲ್ಲವೂ ಸೇರಿದೆ. ಐಶ್ವರ್ಯವೆಂದರೆ, ದ್ರವ್ಯದ ರಾಶಿಯಮೇಲೆ ಹೊರಳಾಡಬಹುದು. ರಾಜರುಗಳೆಲ್ಲಾ ಮನ್ನಣೆ, ನಾಲ್ಕು ಜನ ಮಕ್ಕಳು; ಅದರಲ್ಲಿಯೂ ಗಂಡುಮಕ್ಕಳು; ಪತಿಯ ಚಿತ್ತಾನುವರ್ತಿನಿಯಾದ ಪತ್ನಿ ಅಂತೂ ನಾಯಕರಿಗೆ ಇದಿರಿಲ್ಲವಾಯಿತು. ಹೀಗಿರುವಾಗ ಅವಿವೇಕವು ಇದಕ್ಕೆ ಸಹಕಾರಿಯಾಗಲೇಬೇಕು. ತಾವು ಯಾರು? ತಾವು ಅವತರಿಸಿ ಮಾಡಬೇಕಾದ ಕಾರ್ಯವಾವುದು? ಎಂಬುದನ್ನು ಮರತೇ ಬಿಟ್ಟರು. ಆಹಾ!—ಮರ್ತ್ಯಲೋಕದ ಸಂಬಂಧದಲ್ಲಿ ಧನ, ಕನಕ, ದಾರಾಪುತ್ರಾದಿ ಮೋಹ ಪಾಶದಲ್ಲಿ ಸಿಕ್ಕಿದನೆಂದರೆ ಇದರಿಂದ ಪಾರಾಗುವುದು ಬಹು ಕಷ್ಟ.

ವಾಚಕರೇ! ದೇವರ್ಷಿಗಳಾದ ಇವರೇ ಹೀಗಾದರೆಂದಮೇಲೆ ಸಾಮಾನ್ಯಜೀವಿಗಳು ವಿಷಯಾಸಕ್ತಿಯಿಂದ ಪಾರಾಗುವುದು ಹೇಗೆಂಬುದನ್ನು ತಾನೇ ಯೋಚಿಸಿರಿ.

ಅಸ್ತು. ನಾಯಕರ ಪತ್ನಿಯವರು ಮಾತ್ರ ಆಗಾಗ್ಯೆ, ಹರಿಕಥಾ ಪುರಾಣಾದಿಗಳನ್ನು ಶ್ರವಣಮಾಡುತ್ತಾ ಆಸ್ತಿಕರಾಗಿ ನಾಯಕರಿಗೂ ಪದೇಪದೇ ಧರ್ಮಮಾರ್ಗವನ್ನು ಸೂಚಿಸುತ್ತಿದ್ದರು. ನಾಯಕರಿಗೆ ಮಾತ್ರ ಈ ಮಾತು

§ ನವಕೋಟಿನಾರಾಯಣ ಎಂದರೆ ಆ ಕಾಲದಲ್ಲಿರುತ್ತಿದ್ದ ಪ್ರತಿಯೊಂದು ನಾಣ್ಯಾದಿಗಳನ್ನೂ ಒಂಭತ್ತು ಕೋಟಿಯಂತೆ ಸಂಗ್ರಹಿಸಿದ್ದವರನ್ನು ಮಾತ್ರ ಈ ಬಿರಿದಿನಿಂದ ಕರೆಯುತ್ತಿದ್ದರಂತೆ. ಅಂದ ಮೇಲೆ ನಾಯಕರ ಭಾಗ್ಯದಬೆಲೆ ಎಷ್ಟೆಂಬುದನ್ನು ವಾಚಕರೇ ಊಹಿಸಬೇಕು.

ಕಿವಿಗೆ ಮುಟ್ಟುತ್ತಲೇ ಇರಲಿಲ್ಲ. ಇವರ ಉಪದೇಶವೇನೂ ಫಲಕಾರಿಯಾಗಲಿಲ್ಲ. ಬಾಯಿಯವರು ಮಾತ್ರ ತಮ್ಮ ಪತಿದೇವನ ನಾಸ್ತಿಕತೆಯನ್ನು ಕುರಿತು ಬಹುವಾಗಿ ಚಿಂತಿಸುತ್ತಾ ಆಸ್ತಿಕನಾಗುವಂತೆ ಅನುಗ್ರಹಿಸಬೇಕಾಗಿ ಭಗವಂತನನ್ನು ಪ್ರಾರ್ಥಿಸುತ್ತಿದ್ದರು.

## ಲೋಭಿಯೆ, ನಾಸ್ತಿಕನೆ?.

ನಾಯಕರು ನಾಸ್ತಿಕರಾಗಿಯೇ ಇದ್ದರೆ? ಇಲ್ಲ, ಹೀಗೆಯೇ ಬಹು ಕಾಲವಿರಲಿಲ್ಲ.

ಸಜ್ಜನರ ಉದ್ಧಾರಾರ್ಥವಾಗಿ ಮಾರ್ಗದರ್ಶಿಗಳಾಗಬೇಕೆಂದು ಭೂಮಿಯಲ್ಲವತರಿಸಿದ ಇವರೇ ಐಶ್ವರ್ಯಾಂಧಕಾರದಲ್ಲಿ ಕಣ್ಣುಕಾಣದವರಾದರೆಂದ ಮೇಲೆ, ಇನ್ನು ಪ್ರಪಂಚದ ಉದ್ಧಾರಕಾರ್ಯವಾಗುವುದಾದರೂ ಹೇಗೆ? ಪಾಮರರ ಪಾಡೇನು? ಆದುದರಿಂದ ಮೊದಲು ಇವರನ್ನು ಸಂಸಾರಬಂಧದಿಂದ ಮುಕ್ತರನ್ನಾಗಿ ಮಾಡಬೇಕೆಂದು ಯೋಚಿಸಿ, ಶ್ರೀಹರಿಯು ನಿಜಪುತ್ರನಾದ ಕಮಲಾಸನನನ್ನೇ ತನ್ನಪುತ್ರನನ್ನಾಗಿ ಮಾಡಿಕೊಂಡು, ಸ್ವಯಂ ವೃದ್ಧಬ್ರಾಹ್ಮಣನಾಗಿ ಬಂದನು.

ಎಲ್ಲಿಗೆ ಬಂದನು? ನಾಯಕರಲ್ಲಿಗೆ, ಬಂದರೇನು? ಬಡವರಿಗೆ ನಾಯಕರ ಭೇಟಿಯಾಗುವುದೇ ಕಠಿಣ. ಹಾಗೂ ಪ್ರಯತ್ನಪಟ್ಟು ಎದುರಿಗೆ ಬಂದಾಗ್ಯೂ, ದರಿದ್ರರನ್ನು ಕಣ್ಣೆತ್ತಿ ಕೂಡಾ ನೋಡುತ್ತಿರಲಿಲ್ಲ. ಆದರೆ ಬಂದಿರತಕ್ಕ ಬ್ರಾಹ್ಮಣನೇನು ಸಾಮಾನ್ಯನೆ? ಹಟಹಿಡಿದು ನಾಯಕರನ್ನು ಮಾತನಾಡಿಸಿದನು. ಶ್ರೀಮಂತರೇ? ನಾನೊಬ್ಬ ಬಡಬ್ರಾಹ್ಮಣ, ಪುಣ್ಯವಂತರಾದ ತಮ್ಮ ಭೇಟಿಗಾಗಿ ಬಂದೆ; ಈ ಬಾಲಕನಿಗಾದರೋ ಉಪನಯನಕಾಲವು ಮೀರುತ್ತಾ ಬಂದಿತು, ಇದಕ್ಕಾಗಿ ನಮ್ಮ ಸಮಾಜದವರ ಪರಿಹಾಸಕ್ಕೊಳಗಾಗಿದ್ದೇನೆ, ಹೇಗಾದರೂ ಈ ಉಪನಯನ ಮಂಗಲಕಾರ್ಯಕ್ಕೆ ಸಹಾಯ ಮಾಡಿ ಪುಣ್ಯ ಕೀರ್ತಿಗಳಿಗೆ ಭಾಗಿಗಳಾಗಬೇಕು. ಈ ವೃದ್ಧಾಪ್ಯದಲ್ಲಿ ಮತ್ತೆಂಟುಕಡೆ ತಿರುಗಿ ಯಾಚಿಸಲಾರೆ, ತಮ್ಮ ಅಮಿತೈಶ್ವರ್ಯಕ್ಕೆ ಇದೇನೊಂದಗಾಧವಲ್ಲ. ದೇವರು ಕೊಟ್ಟಿರುವಾಗ ಸತ್ಕಾರ್ಯಕ್ಕೆ ಸಹಾಯಮಾಡಬೇಕು.

ಹಣ್ಣಿದ್ದ ಮರಗಳಲ್ಲವೆ ಹಕ್ಕಿಗಳಿಗಾಶ್ರಯ. ಹಾಗೆಯೆ ಪುಣ್ಯವಂತರಾದ ತಮ್ಮಂತಹರೇ ಬಡವರಿಗಾಶ್ರಯ; ಎಂದು ನಾನಾಪ್ರಕಾರವಾಗಿ ಹೊಗಳಿಕೆಗಳನ್ನು ಹಾಕಿದನು. ನಾಯಕರಿಗೆ ಮಾತ್ರ ಈ ಮಾತುಗಳು ಕಿವಿಯಮೇಲೆ ಬಿದ್ದಿತೋ ಇಲ್ಲವೋ ತಿಳಿಯದು, ಬ್ರಾಹ್ಮಣನ ಮಾತಿಗೆ ಪ್ರತ್ಯುತ್ತರವನ್ನೇನೂ ಕೊಡಲಿಲ್ಲ.

ಬಂದಿರತಕ್ಕ ಬ್ರಾಹ್ಮಣನು ಬಿಡತಕ್ಕವನೆ? ಎಂದಿಗೂ ಇಲ್ಲ. ಹಿಂದೆ ಬಲಿಚಕ್ರವರ್ತಿಯಲ್ಲಿ ಹೋಗಿ ಯಾಚಿಸಿ ವೃತ್ತಿಯ ಅನುಭವವುಳ್ಳವನಾದುದರಿಂದ, ನಾಯಕರ ಮನೆಗೆ ತಪ್ಪದಂತೆ ಆರುತಿಂಗಳು ಒಂದೇ ಸಮನೆ ವಾರ ನಡೆದು ಹರಿಕೆಹಾಕಿ ಹೋಗುತ್ತಿದ್ದನು. ನಾಯಕರಿಗೆ ಇಷ್ಟಾದರೂ ಈ ಬ್ರಾಹ್ಮಣನನ್ನು ಕಣ್ಣೆತ್ತಿ ನೋಡುವಷ್ಟು ಧರ್ಮಬುದ್ಧಿಯು ಕೂಡ ಹುಟ್ಟಲಿಲ್ಲ. ಆಹಾ! ಐಶ್ವರ್ಯಾಂಧಕಾರವೆ, ಜ್ಞಾನೇಂದ್ರಿಯಗಳಿಗೇ ಮುಚ್ಚಳವನ್ನು ಹಾಕುವುದಲ್ಲಾ! ಎಂದಂದುಕೊಂಡು ಕಡೆಗೊಂದುದಿನ ಬೇಸತ್ತವನಂತೆ ನಟಿಸಿ, ನಾಯಕರನ್ನು ಕುರಿತು "ಸ್ವಾಮಿ! ತಮ್ಮಿಂದಾಗುವುದಾದರೆ ಸಹಾಯ ಮಾಡಿ. ಇಲ್ಲವಾದರೆ ಅನುಕೂಲವಿಲ್ಲವೆಂದಾದರೂ ಹೇಳಿಬಿಡಿ" ಎಂದು ಖಂಡಿತೋಕ್ತಿಯಿಂದ ಹೇಳಿದನು.

ನಾಯಕರು ಬ್ರಾಹ್ಮಣನ ನಿಷ್ಠುರೋಕ್ತಿಯಿಂದ ಕೋಪಗೊಂಡು ತಿರುಪಬೇಡುವವರಿಗೂ ಈ ಪಾಪದ ಅಹಂಕಾರ ಉಂಟೆ? ಎಂದಂದುಕೊಂಡು ಅಸಹ್ಯಪಟ್ಟು ಸವಕಲು ದುಡ್ಡುಗಳನ್ನು ತುಂಬಿರಿಸಿದ್ದ ಎರಡು ಹೇರು ರೊಕ್ಕವನ್ನು ತರಿಸಿ, ಮುಂದೆ ಸುರಿದು 'ಇದರಲ್ಲಿ ಒಂದು ದುಡ್ಡನ್ನು ಆರಿಸಿಕೊ' ಎಂದು ಗದರಿಸಿದರು. ಯಾವ ದೇಶದಲ್ಲಿಯೂ ಸಲ್ಲದ ಈ ದುಡ್ಡನ್ನು ಕಟ್ಟಿಕೊಂಡು ತಾನೇನು ಮಾಡಲಿ, ಎಂದು ಅಸಂತುಷ್ಟನಾದವನಂತೆ ನಟಿಸಿ, 'ರಾಯರೇ? ಇನ್ನು ತಮಗೆ ನನ್ನಕಾಟ ತಪ್ಪಿತು' ಎಂದು ಹೇಳಿ ಬ್ರಾಹ್ಮಣನು ಹೊರಟುಹೋದನು. ಆಗಲೂ ನಾಯಕರಿಗೆ ಆರುತಿಂಗಳಿಂದಲೂ ಅಲೆದಲೆದು ಕೊನೆಗೂ ಬ್ರಾಹ್ಮಣನು ಬರೀಕೈಲಿ ಹೋದನೆಂದು ಸ್ವಲ್ಪವಾದರೂ ಪಶ್ಚಾತ್ತಾಪಹುಟ್ಟಿತೋ ಇಲ್ಲವೊ ತಿಳಿಯದು.

## ಸತೀಧರ್ಮ.

ಲಕ್ಷ್ಮೀಪತಿಗೆ ಭಿಕ್ಷಾವೃತ್ತಿಯೆ? ಆಹಾ! ಭಕ್ತರಿಗಾಗಿ ಸ್ವಾಮಿಯು ಎಂತಹ ವೃತ್ತಿಯನ್ನಾದರೂ ಯಾವ ರೂಪವನ್ನಾದರೂ ಕೈಗೊಳ್ಳುವನು, ಎಂಬುದಕ್ಕೆ ತನ್ನ ಭಕ್ತರಾದ ಪಾಂಡವರ ಬಂಡಿಬೋವನಾದುದೊಂದೇ ಸಾಕ್ಷಿಯಾಗಿದೆ. ತನ್ನ ಅನುಗ್ರಹಕ್ಕೆ ಪಾತ್ರರಾಗತಕ್ಕ ಸುಜೀವಿಗಳು ಸಂಗ ದೋಷದಿಂದಲಾಗಲಿ, ಕಾಲನಿಯಮಕ್ಕೊಳಪಟ್ಟಾಗಲೀ ಯಾವಕಾರಣದಿಂದ ಲಾದರೂ ಮಾರ್ಗತಪ್ಪಿದರೆಂಬ ಸುಳುವು ತಿಳಿದೊಡನೆಯೇ ತಾನೇ ಮಾರ್ಗ ದರ್ಶಕನಾಗಿ ಉದ್ಧರಿಸುವುದೇ ಸ್ವಾಮಿಯ ಮುಖ್ಯ ಸಂಕಲ್ಪ. ಈಗ ಈ ರೂಪವೂ ಭಕ್ತರಿಗಾಗಿಯೆ. ನಾಯಕರ ಪತ್ನಿಯಲ್ಲಿ ಯಾಚಿಸಲು ಬಂದನು. ಸರಸ್ವತೀಬಾಯಿಯವರೇನೋ ಮೊದಲಿಂದಲೂ ಧರ್ಮಶ್ರದ್ಧೆಯುಳ್ಳವರೆ. ಆದರೇನು? ಪರಾಧೀನೆಯಾದುದರಿಂದ ಏನುಮಾಡುವುದಕ್ಕೂ ಸ್ವತಂತ್ರವಿಲ್ಲ, ಇವರ ಧರ್ಮಶ್ರದ್ಧೆಯು ಮನಸ್ಸಿನಲ್ಲಲ್ಲದೆ, ಆಚರಣೆಯಲ್ಲಿ ತರಲು ಅವಕಾಶವಿಲ್ಲ. ಬಾಯಿಯವರು ಬಂದ ಬ್ರಾಹ್ಮಣನನ್ನು ಕಂಡು ನಮಸ್ಕರಿಸಿ, ವಿಶ್ರಮಿಸಿಕೊಳ್ಳಿರೆಂದು ಉಪಚಾರೋಕ್ತಿಗಳಿಂದ ಸಂತೈಸಿ ಅಂಜಲಿಬದ್ಧರಾಗಿ ನಿಂತಿದ್ದರು.

ಬ್ರಾಹ್ಮಣನು "ಅಮ್ಮಾ! ನಾನೀಊರಲ್ಲಿ ರತ್ನಪುಡೀ ವ್ಯಾಪಾರಿಯಾದ ಪ್ರಸಿದ್ಧ ಸಾಹುಕಾರನಲ್ಲಿಗೆ ಹೋಗಿ ಮಗನ ಉಪನಯನಕ್ಕಾಗಿ ಯಾಚಿಸಿದೆನು. ಆರು ತಿಂಗಳಿಂದಲೂ ವಾರನಡೆದು ಸುತ್ತಿ ಸುತ್ತಿ ನನ್ನ ಕೈಕಾಲು ಬತ್ತಿದವು. ಆ ಪಾಪಿಯನ್ನು ಹೊಗಳಿ ಹೊಗಳಿ ನನ್ನ ಬಾಯಿ ಸೋತಿತು. ಇಷ್ಟಾದರೂ ಆ ಚಂಡಾಲನಿಗೆ ಜೇರೇ ಕರುಣಹುಟ್ಟಲಿಲ್ಲ. ಅವನ ಹೃದಯವನ್ನು ಪಾಷಾಣದಿಂದ ನಿರ್ಮಿಸಿರಬಹುದು. ಆದರೂ ಬಿಡದೆ ನಾನು ಮುಷ್ಕರಹಿಡಿದೆನು. ಕಡೆಗೆ ಸವೆದ ದುಡ್ಡಿನಚೀಲವನ್ನು ತಂದು ಸುರಿಸಿ, ಅದರಲ್ಲಿಯೂ 'ಒಂದೇ ಒಂದು ದುಡ್ಡನ್ನು ಆರಿಸಿಕೊ' ಎಂದು ಗದರಿಸಿದನು. ಎಲ್ಲಿಯೂ ಸಲ್ಲದ ದುಡ್ಡನ್ನು ತೆಗೆದುಕೊಂಡು ಮಾಡುವುದೇನು? ಇಷ್ಟು ದೀರ್ಘಕಾಲ ಕಾದಿದ್ದರೂ ಪಾಪಿಯನ್ನಾಶ್ರೈಸಿದ್ದರಿಂದ ಕೊನೆಗೂ ನನ್ನ ಆಸೆಯು ನಿರಾಸೆಯಾದುದಕ್ಕಾಗಿ ದುಃಖದಿಂದ ಆ ಚಂಡಾಲನನ್ನು ಬೈದುಕೊಳ್ಳುತ್ತಾ ಬಂದೆನು.

ಈಗ ನೀನಾದರೂ ದಯಮಾಡಿ ಬ್ರಹ್ಮಪ್ರತಿಷ್ಠಾ ಪುಣ್ಯಕ್ಕೆ ಭಾಗಿನಿಯಾಗಿ ನನ್ನನ್ನೂ ನಮ್ಮ ಸಮಾಜದವರ ದೂಷಣೆಯಿಂದ ತಪ್ಪಿಸಿ, ಕೀರ್ತಿವಂತ ಳಾಗಮ್ಮಾ" ಎಂದು ಆಕೆಯನ್ನು ಯಾಚಿಸಿದನು.

ಈ ಮಾತನ್ನು ಕೇಳಿದ ಸಾಧ್ವಿಯ ಮನಸ್ಸು ಕರಗಿತು, "ಯಾಚನಾ ವೃತ್ತಿಯು ಬಹು ಕಷ್ಟ, ಪರರನ್ನು ಬೇಡುವಾಗ ಆಳುದ್ದ ದೇಹವನ್ನು ಗೇಣು ದ್ದ ಮಾಡಿಕೊಳ್ಳಬೇಕು. ಅವರಲ್ಲಿಲ್ಲಸಲ್ಲದ ಗುಣಗಳನ್ನಾರೋಪಿಸಿ ಹೊಗಳ ಬೇಕು. ಯಾಚಕರ ಸುಖದುಃಖಗಳನ್ನರಿಯದ ನಿಷ್ಕರುಣಿಗಳು, ಇಂದು ಬಾ, ನಾಳೆ ಬಾ, ಈಗ ಬಾ, ಆಗ ಬಾ, ಎಂಧು ಹೇಳಲು, ಅವರು ಹೇಳಿದ ವೇಳೆಯ ನ್ನನುಸರಿಸಿ ಗಾಣದ ಎತ್ತಿನಂತೆ ಸುತ್ತಬೇಕು. ಹೆತ್ತವರಿಗಿಂತಲೂ ಉತ್ತಮ ರಂತೆ ಮತ್ತರಾದವರಲ್ಲ ಅತ್ಯಂತ ವಿನಯ ವಿಧೇಯತೆಯನ್ನು ತೋರಿಸಬೇಕು, ಸ್ವಾಭಿಮಾನವನ್ನು ಸಂಪೂರ್ಣವಾಗಿ ಬಿಡಬೇಕು. ಇಷ್ಟಾದರೂ ಈಗ ಅನು ಕೂಲವಿಲ್ಲವೆಂದು ಹೇಳಲು, ವಿಷವನ್ನು ತಿಂದ ಇಲಿಯಂತೆ ಸಂಕಟಪಡ ಬೇಕು. ಛಿ! ಛಿ! ಯಾಚನಾವೃತ್ತಿಯು ಬಹುಕಷ್ಟ, ಬಹುಕಷ್ಟ, ನಿರ್ದಯ ನಾದ ವಿಧಿಯು ಇಂತಹ ದುರ್ಯೋಗವನ್ನು ಪ್ರಾಣಿಗಳಿಗೆ ಏತಕ್ಕಾಗಿ ಘಟನೆ ಮಾಡುವನೋ? ಇದರಿಂದಲಾದರೋ ತನಗೇನು ಸಂತೋಷವೋ? ವೃಥಾ ವಿಧಿಯನ್ನೇಕೆ ನಿಂದಿಸಬೇಕು! ಅವರವರಕರ್ಮಕ್ಕೆ ತಕ್ಕ ಫಲವನ್ನು ಕೊಡು ವನು. ಅಂತು ಯಾಚನಾವೃತ್ತಿಯು ಬಹು ಕಷ್ಟ, ಅದರಲ್ಲಿಯೂ ಪಾಪ, ಈ ವೃದ್ಧಾಪ್ಯದಲ್ಲಿ ಮತ್ತೂ ಕಷ್ಟ." ಎಂದಂದುಕೊಂಡಳಲ್ಲದೆ ತನಗೇನು ಮಾಡುವುದಕ್ಕೂ ಸ್ವತಂತ್ರವಿಲ್ಲ. ಹಾಗೆಂದು ಬಂದಿರತಕ್ಕ ಬ್ರಾಹ್ಮಣ ನಿಗೆ, ಅದರಲ್ಲಿಯೂ ವೃದ್ಧನಿಗೆ ಸಹಾಯಮಾಡದಿರಲು ಸಮಾಧಾನವಿಲ್ಲ. ಈ ಉಭಯಸಂಕಟದಿಂದ ತಾನೇನು ಮಾಡಬೇಕೆಂಬುದೇ ತೋರದೆ ಕರ್ತವ್ಯ ಮೂಢಳಾಗಿ ಸ್ವಲ್ಪಹೊತ್ತು ಸುಮ್ಮನಿದ್ದಳು. ಈಗ ಮತ್ತೊಂದು ಯೋ ಚನೆ ತಲೆದೋರಿತು. 'ಸ್ವಾಮಿ! ಈಗ ತಾವು ನಿಂದಿಸಿದವರಾರೆಂದು ಬಲ್ಲಿರಾ?' ಎಂದು ಬ್ರಾಹ್ಮಣನನ್ನು ಕೇಳಿದಳು. ಬ್ರಾಹ್ಮಣನು 'ಆತನಾರಾದರೂ ಆಗಲಿ, ಆ ಕರ್ಮಚಂಡಾಲನಾದ ಪಾಪಿಯ ಹೆಸರನ್ನು ನನ್ನೆದುರಿಗೆ ಹೇಳ ಬೇಡ' ಎಂದನು. ಬಾಯಿಯು ನಾರಾಯಣಾ! ತನ್ನ ಪತಿಯು ಲೋಕದಲ್ಲಿ

ನಿಂದಿತನಾದನೆ? ತಾನು ಪತಿಯ ಅಪಯಶಸ್ಸನ್ನು ಕಿವಿಯಿಂದ ಕೇಳುವ ನಿರ್ಭಾಗ್ಯಳಾದೆನೇ? ಎಂದು ಸಂಕಟಪಟ್ಟು, ಬ್ರಾಹ್ಮಣನನ್ನು ಕುರಿತು, 'ಸ್ವಾಮಿ! ತಾವು ಇದುವರಿವಿಗೂ ಯಾರನ್ನು ದೂಷಿಸಿದಿರೋ ಅವರೇ ನನ್ನ ಒಡೆಯ. ದಯವಿಟ್ಟು ನನ್ನ ಇದಿರಿನಲ್ಲಿ ಅವರ ದೂಷಣೆಯನ್ನು ಮಾಡಬೇಡಿ, ಕ್ಷಮಿಸಿ' ಎಂದಳು.

ಬ್ರಾಹ್ಮಣನು 'ಬಾಯಿ! ಅದೇನಾದರೂ ಆಗಲಿ, ಆತನಾರಾದರೂ ಆಗಲಿ, ಆ ವಿಷಯಗಳೆಲ್ಲಾ ನಮಗೆ ಬೇಡ. ನೀನಾದರೂ ಸಹಾಯಮಾಡುವೆಯೋ ಇಲ್ಲವೊ?' ಎನ್ನಲು, 'ಸ್ವಾಮಿ! ನನಗಾವಸ್ವತಂತ್ರ್ಯವೂ ಇಲ್ಲ, ಒಂದು ಹಿಡಿ ಭಿಕ್ಷವನ್ನು ಹಾಕುವಷ್ಟು ಪುಣ್ಯವೂ ನನಗಿಲ್ಲವಲ್ಲಾ, ನಾನೇನು ಮಾಡಲಿ' ಎಂದು ಅಶ್ರುಪೂರಿತನಯನೆಯಾಗಿ ಉತ್ತರವನ್ನು ಕೊಟ್ಟಳು. ಬ್ರಾಹ್ಮಣನು 'ದಯಾವಂತಳೇ! ನಿನ್ನ ಮೂಗಿನಲ್ಲಿರುವ ಮೂಗುತಿಯನ್ನು ದಯಮಾಡಿಕೊಟ್ಟರೆ ನಿನಗೂ ಬ್ರಹ್ಮಪ್ರತಿಷ್ಠಾಮಾಡಿದ ಪುಣ್ಯಬರುವುದು. ನನ್ನನ್ನೂ ಸಮಾಜದವರ ಆಕ್ಷೇಪಣೆಯಿಂದ ಪಾರುಮಾಡಿ ಉದ್ಧರಿಸಿದಂತಾಗುವುದು. ಹೇಗಾದರೂ ದೊಡ್ಡಮನಸ್ಸು ಮಾಡಮ್ಮಾ' ಎಂದನು. ಅಂಗಲಾಚಿ ಬೇಡಿಕೊಳ್ಳುವ ಬ್ರಾಹ್ಮಣನನ್ನು ನೋಡಿ ಆ ಸಾಧ್ವೀಮಣಿಗೆ ಇನ್ನು ತನ್ನ ಮನಸ್ಸನ್ನು ಬಿಗಿ ಹಿಡಿಯುವುದು ಬಹು ಕಷ್ಟವಾಗಿ, ನಾನಾಪಥವಾದ ಯೋಚನೆಗಳಿಗಾರಂಭವಾಯಿತು. ಮೂಗುತಿಯನ್ನು ಕೊಡಲೇ ಪತಿಯಾಜ್ಞೆಯಿಲ್ಲದೆ ಕೊಡಲು ದೋಷವೋ ಹೇಗೊ? ಅಲ್ಲದೆ ಪತಿಯ ಕೋಪಕ್ಕೆ ಪಾತ್ರಳಾಗಬೇಕಾಗುವುದು. ಕೊಡದಿರಬೇ ಬ್ರಾಹ್ಮಣನು ಆಶಾಭಂಗವಾಗಿ ಸಂಕಟದಿಂದ ನಿಟ್ಟುಸುರುಬಿಡುವ ದೋಷಕ್ಕೆ ಭಾಗಿನಿಯಾಗಬೇಕಾಗುವುದು. ಹೇಗಾದರೂ ಬ್ರಾಹ್ಮಣನ ಆಶಾಪೂರ್ಣಮಾಡಿ ಸಂತೋಷಪಡಿಸುವುದೇ ಮುಖ್ಯ ಧರ್ಮ. ಕೊಟ್ಟೇ ಕೊಡುತ್ತೇನೆಂದು ನಿಶ್ಚೈಸಿದಳು. ಪುನಃ ಪತಿಯ ಭಯ ಉಂಟಾಯಿತು. ಆದರೂ ಧೈರ್ಯಮಾಡಿಕೊಂಡು, ಇದರಿಂದ ತನ್ನ ಪತಿಯು ಕೋಪಿಸಿಕೊಂಡು ದಂಡಿಸಬಹುದು, ದಂಡಿಸಿದರೂ ದಂಡಿಸಲಿ, ತನ್ನ ಸುಖಕ್ಕಾಗಿ ಪರೋಪಕಾರಕ್ಕೆ ಹಿಂಜರಿಯತಕ್ಕದಲ್ಲ. ಪರರಿಗಾಗಿ ಎಂತಹ ಕಷ್ಟಬಂದರೂ ಏನು ಶಿಕ್ಷೆಯಾದರೂ ಅನುಭವಿಸಲೇಬೇಕು. ಹಾಗೂ ಶಿಕ್ಷಿತಳಾದರೆ ದುಷ್ಕಾರ್ಯವನ್ನು ಮಾಡಿ ಶಿಕ್ಷಿತಳಾದಳೆಂಬ ಅಪಕೀರ್ತಿಯು ಬೇರೆ ಬರಲಾರದಷ್ಟೆ

ಅಲ್ಲದೆ ಶಿಕ್ಷೆಯೂ ಪತಿದೇವನಿಂದಲ್ಲವೆ? ಆಗಲಿ, ಪತಿದೇವನಿಂದಾಗುವ ಅಪಮಾನವೇ ಬಹುಮಾನ, ಶಿಕ್ಷೆಯೇ ಅನುಗ್ರಹ, ತಿರಸ್ಕಾರವೇ ಮಹಾಪ್ರಸಾದ, ಇದೇನು ದುರ್ವ್ಯಯವಲ್ಲ, ಬಡವನಿಗೆ ಅದರಲ್ಲಿಯೂ ಬ್ರಾಹ್ಮಣನಿಗೆ ತತ್ರಾಪಿ ವೃದ್ಧನಿಗೆ ಮೇಲಾಗಿ ಉಪನಯನ ಮಂಗಳಕಾರ್ಯಕ್ಕೆ ಇಂತಹ ಸತ್ಕಾರ್ಯಕ್ಕೆ ಸಹಾಯಮಾಡುವ ಸುಸಂಧಿಯೊದಗಿರುವಾಗ, ಎಂದೂ ಉದಾಸೀನ ಮಾಡಲಾಗದು. ಎಂದು ಬ್ರಾಹ್ಮಣನನ್ನು ಸಮೀಪಕ್ಕೆ ಕರೆದು, ತನ್ನ ಮೂಗಿನಲ್ಲಿದ್ದ ಮೂಗುತಿಯನ್ನು ತೆಗೆದು ಆತನ ಕೈಯ್ಯಲ್ಲಿಟ್ಟು ಕೃಷ್ಣಾರ್ಪಣವೆಂದಳು. †

ಬ್ರಾಹ್ಮಣನು ಎಂದೂ ಕಾಣದ ಹುಟ್ಟು ಬಡವನಿಗೆ ದೊರೆತಷ್ಟು ಸಂತೋಷವನ್ನು ನಟಿಸುತ್ತಾ ಸರಸ್ವತೀಬಾಯಿಯ ಉದಾರಗುಣವನ್ನು ಬಹಳವಾಗಿ ಕೊಂಡಾಡಿ ಹೊರಟುಹೋದನು.

## ಭಗವನ್ಮಾಯೆ.

ಬ್ರಾಹ್ಮಣನು ಎಲ್ಲಿಗೆ ಹೋದನು! ಮೂಗುತಿಯನ್ನು ತೆಗೆದುಕೊಂಡು ಹೊರಟೇಹೋದನೆ? ಇಲ್ಲ, ಇಲ್ಲ, ತಾನು ಬಂದ ಕಾರ್ಯವಾಯಿತೆ? ಅದೂ ಇಲ್ಲ. ತಾನು ಬಂದುದೇತಕ್ಕೆ? ನಾಯಕರಿಗೆ ಜ್ಞಾನೋದಯವನ್ನುಂಟು ಮಾಡುವುದಕ್ಕೆ. ನಾಯಕರಿಗೆ ಇನ್ನೂ ಧರ್ಮದವಾಸನೆಯೇ ಅಂಕುರಿಸಲಿಲ್ಲ, ಮೂಗುತಿಯ ಯಾಚನೆಗಾಗಿ ಮಾತ್ರ ಬಂದವನಲ್ಲ. ಆದುದರಿಂದ ರೂಪಾಂತರದಿಂದ ನಾಯಕರ ಅಂಗಡಿಗೇ ಬಂದನು. ನಾಯಕರನ್ನು ಕಂಡು, "ನಾಯಕರೇ? ಇದೋ, ಈ ಮೂಗುತಿಯನ್ನು ತೆಗೆದುಕೊಂಡು ತಕ್ಕ ಮೌಲ್ಯವನ್ನು ಕೊಡುವಿರಾ?" ಎಂದನು. ನಾಯಕರು ಮೂಗುತಿಯನ್ನು ನೋಡಿದೊಡನೆಯೇ ರತ್ನಗಳ ಪರೀಕ್ಷೆಯಲ್ಲಿ ನಿಪುಣರಾದುದರಿಂದ ಈ ಮೂಗುತಿಯು ನಮ್ಮ ಮನೆ ಹೆಂಗಸಿನ ಮೂಗುತಿಯಂತೆ ಇದೆ. ಅಥವಾ ಅದೇ

† ಮೂಗುತಿಯ ವಿಷಯದಲ್ಲಿ ಮತ್ತೊಂದು ಐತಿಹ್ಯವುಂಟು. ಗಂಡನಿಗಲ್ಲದೆ ಬೇರೆ ಯಾರಿಗೂ ಕಾಣಿಸಬಾರದಾಗಿ ವರವಿದ್ದಹಾಗೂ, ಅಂತಹ ಮೂಗುತಿಯನ್ನು ಬ್ರಾಹ್ಮಣನು ಕಂಡು ಕೇಳಿದ್ದರಿಂದ, ಈತನು ಸಾಮಾನ್ಯ ಬ್ರಾಹ್ಮಣನಲ್ಲ, ಯಾರೋ ಮಹಾ ಜ್ಞಾನಿಯಾಗಿರಬೇಕೆಂದು ನಿರ್ಧರಿಸಿ, ಮೂಗುತಿಯನ್ನು ಕೊಟ್ಟಳೆಂದು.

ಮೂಗುತಿಯೊ? ಎಂದು ಸಂಶಯಪಟ್ಟರು. ಸೇವಕರು, 'ಸ್ವಾಮಿ! ತಮ್ಮ ಪತ್ನಿಯವರ ಮೂಗುತಿಯಂತೆ ಬೇರೊಂದು ಇರಬಾರದೇಕೆ?' ಎಂದುಹೇಳಲು ನಾಯಕರು ಬಂದಿರತಕ್ಕ ವ್ಯಾಪಾರಿಯ ರೂಪಸಾಮಗ್ರಿಗಳು ಕೇವಲ ದೊಡ್ಡ ವ್ಯಾಪಾರಸ್ಥನ ಲಕ್ಷಣಗಳನ್ನೇ ಸೂಚಿಸುತ್ತಿದ್ದುವಾದುದರಿಂದ ಹೆಚ್ಚು ಸಂಶಯಕ್ಕವಕಾಶಕೊಡದೆ ಬೇರೊಂದಾಗಿರಬಾರದೇಕೆ? ಎಂದು ತಮ್ಮಲ್ಲಿ ತಾವೇ ಸಮಾಧಾನವನ್ನು ಮಾಡಿಕೊಂಡರು.

ನಾಯಕರು ರತ್ನಪರೀಕ್ಷೆಯಲ್ಲಿ ನಿಪುಣರೆಂಬುವುದು ವಾಚಕರ ನೆನಪಿನಲ್ಲಿರಬಹುದು. ಈ ಮೂಗುತಿಯಲ್ಲಿರುವ ರತ್ನಗಳನ್ನೂ ಅದರ ನಾಜೂಕಾದ ಕುಂದಣದ ಕೆಲಸವನ್ನು ನೋಡಿ ಹೇಗಾದರೂ ಆ ಒಡವೆಯನ್ನು ಸಂಗ್ರಹಿಸಲೇ ಬೇಕೆಂದು ನಾಯಕರಿಗೆ ಆಶೆ. ಆದರೆ ಹೆಚ್ಚು ಬೆಲೆಯನ್ನು ಕೇಳಲು ಕೊಡುವುದಕ್ಕೆ ಸಮಾಧಾನವಿಲ್ಲ. ಸುಲಭಕ್ರಯದಿಂದ ಆ ಮೂಗುತಿಯನ್ನು ಸಂಗ್ರಹಿಸಲೇಬೇಕೆಂದು ನಿಶ್ಚೈಸಿ, ಮೊದಲು ವ್ಯಾಪಾರಿಯ ಆಶೆಯು ಎಲ್ಲಿಯವರಿವಿಗಿದೆಯೋ ತಿಳಿದುಕೊಳ್ಳೋಣವೆಂದು ವ್ಯಾಪಾರಿಯನ್ನು ಕುರಿತು, 'ಈ ಮೂಗುತಿಗೆ ತಾವೆಷ್ಟು ಅಪೇಕ್ಷಿಸುವಿರಿ?' ಎಂದುಕೇಳಿದರು. ವ್ಯಾಪಾರಿಯು, 'ಸ್ವಾಮಿ! ತಾವೇನು ಒಡವೆಯ ಯೋಗ್ಯತೆಯನ್ನು ಅರಿಯದವರಲ್ಲ. ನನಗೇನೋ ಸದ್ಯ ದುಡ್ಡಿನ ಅಡಚಣೆ ಬಹಳವಾಗಿದೆ. ಅನಿವಾರ್ಯವಿದ್ದುದರಿಂದ ಬಂದಿರುತ್ತೇನೆ. ತಾವು ಸಂತೋಷಪಟ್ಟು ಎಷ್ಟು ಕೊಟ್ಟರೆ ಅಷ್ಟರಿಂದಲೇ ತೃಪ್ತನಾಗುತ್ತೇನೆ' ಎಂದನು. ನಾಯಕರಿಗೆ ಬಹು ಸಂತೋಷವಾಯಿತು; ಹೇಗೂ ಬಂದಿರತಕ್ಕವನಿಗೆ ದುಡ್ಡಿನ ಆವಶ್ಯಕತೆಯು ಬಹಳವಿರುವುದರಿಂದ ಕೊಟ್ಟೇಕೊಡುತ್ತಾನೆ; ಇನ್ನು ಒಡವೆಯು ತಮ್ಮದೇ ಆಯಿತು; ಎಂದು ಬೇಕಾದಷ್ಟು ಬಾಯಿಮಾತಿನಿಂದ ಹೊಗಳಿ, ಒಡವೆಗೆ ನಾಲ್ಕುನೂರು ರೂಪಾಯಿ ಬೆಲೆಕಟ್ಟಿ ಕೂಡಲೇ ಹಣವನ್ನು ಕೊಟ್ಟುಬಿಟ್ಟರು. ವ್ಯಾಪಾರಿಯು ಅಷ್ಟರಿಂದಲೇ ತೃಪ್ತನಾಗಿ ಹೊರಟುಹೋದನು.

ಒಡವೆಗೆ ತಕ್ಕ ಮೌಲ್ಯವಲ್ಲವೆಂದು ಯಾರಾದರೂ ತಿಳಿದು ವ್ಯಾಪಾರಿಗೆ ದುರ್ಬೋಧನೆಮಾಡುವರೋ? ಅಥವಾ, ಅವನಿಗೇ ಮನಸ್ಸು ತಿರುಗಿ ಮತ್ತೆಲ್ಲಿ ಬಂದು ತನ್ನ ಒಡವೆಯನ್ನು ತನಗೆ ಕೊಡಿರೆಂದು ಕೇಳಿಬಿಡುವನೋ? ಎಂಬುವ

ಅನುಮಾನ ನಾಯಕರಿಗೆ ಉಂಟಾಗಿ ಹತ್ತಿರಿದ್ದವರನ್ನು ಕರೆದು 'ವ್ಯಾಪಾರಿಯು ಎಲ್ಲಿಗೆ ಹೋಗುವನು? ಯಾರೊಂದಿಗೆ ಮಾತನಾಡುವನು? ಎಲ್ಲಾ ವಿಷಯಗಳನ್ನೂ ತಿಳಿದು ಬನ್ನಿ'ರೆಂದು ಕಳುಹಿಸಿದರು. ಸೇವಕರು ವ್ಯಾಪಾರಿಯನ್ನು ಹಿಂಬಾಲಿಸಿ ಆತನು ವಿಠ್ಠಲದೇವರ ಗುಡಿಯೊಳಕ್ಕೆ ಹೋದುದನ್ನು ಕಂಡು ತಾವೂ ಅಲ್ಲಿಗೇ ಹೋದರು. ವಿಠ್ಠಲನ ಮೂರ್ತಿಯನ್ನು ವ್ಯಾಪಾರಿಯು ಆಲಂಗಿಸಿದುದನ್ನು ನೋಡಿದರು. ನೋಡನೋಡುತ್ತಿದ್ದ ಹಾಗೆಯೆ ವ್ಯಾಪಾರಿಯು ಅದೃಶ್ಯನಾಗಲು ಆಶ್ಚರ್ಯದಿಂದ ನಾಯಕರಿಗೆ ಈ ಸಂಗತಿಯನ್ನು ಬಂದು ತಿಳುಹಿಸಿದರು. ನಾಯಕರು ಇವರ ಮೌಢ್ಯಕ್ಕಾಗಿ ನಕ್ಕು 'ಏನು? ವ್ಯಾಪಾರಿಯು ದೇವರಲ್ಲಿಯೇ ಸೇರಿಹೋದನೋ? ವ್ಯಾಪಾರಿಯೇ ದೇವರೋ? ಅಥವಾ ದೇವರೇ ವ್ಯಾಪಾರಿಯೋ? ನಿಮಗೆಂತಹ ಹುಚ್ಚು ನಂಬುಗೆ?' ಎಂದರು. ಸೇವಕರು 'ಸ್ವಾಮಿ! ನಾವು ಕಣ್ಣಾರೆ ಕಂಡೆವು' ಎಂದು ಎಷ್ಟು ಹೇಳಿದರೂ ನಂಬದೆ ಹಾಸ್ಯಮಾಡಿ ನಕ್ಕುಬಿಟ್ಟರು.

ಹಾಗೆಯೇ ಸ್ವಲ್ಪಹೊತ್ತಿನಲ್ಲಿ ನಾಯಕರ ಮನಸ್ಸು ವಿಕಲ್ಪವಾಯಿತು. ಈ ದಿವಸದ ವ್ಯಾಪಾರವು ಸಾಕು, ಏನೋ ಮನಸ್ಸು ಸಮಾಧಾನವಿಲ್ಲನೆಂದು ಒಡವೆಗಳನ್ನೆಲ್ಲಾ ತೆಗೆದಿರಿಸಿದರು. ತತ್ರಾಪಿ, ಹೊಸಮೂಗುತಿಯು ಅಪೂರ್ವರತ್ನಗಳುಳ್ಳದ್ದಾದುದರಿಂದ ಬಹಳ ಬಂದೋಬಸ್ತಾಗಿ ಭದ್ರಪಡಿಸಿದರು. ಸ್ವಲ್ಪಹೊತ್ತು ಇಲ್ಲಿಂದಲ್ಲಿಗೂ ಅಲ್ಲಿಂದಿಲ್ಲಿಗೂ ತಿರುಗಾಡಿದರು. ಮೂಗುತಿಯನ್ನು ತಂದು ವಿಕ್ರಯಿಸಿದವನ ವೇಷಭಾಷೆಗಳನ್ನೂ, ಆತನ ವಿಷಯವಾಗಿ ಜನಗಳು ಬಂದು ಹೇಳಿದುದನ್ನು ಕುರಿತು, ಯೋಚಿಸಲಾರಂಭಿಸಿದರು. ಯೋಚಿಸಿ ಯೋಚಿಸುತ್ತಿದ್ದಹಾಗೆಲ್ಲಾ ಸಂಶಯವು ಹೆಚ್ಚುತ್ತಲೇ ಬಂದಿತು. ಇನ್ನು ಅಂಗಡಿಯಲ್ಲಿ ಕುಳಿತುಕೊಳ್ಳಲು ಸಮಾಧಾನವಿಲ್ಲದೆ ಮತ್ತೊಮ್ಮೆ ತೆಗೆದಿಟ್ಟ ಒಡವೆಗಳನ್ನೆಲ್ಲಾ ಸರಿಯಾಗಿ ಪರೀಕ್ಷಿಸಿ ಮೊಹರ್‌ಮಾಡಿ ಅಂಗಡಿ ಬಾಗಿಲನ್ನು ಹಾಕಿ ಮನೆಗೆ ಬಂದರು.

## ಮೂಗುತಿ.

ನಾಯಕರು ಮನೆಯಲ್ಲಿ ಶತಪಥತಿರುಗಲಾರಂಭಿಸಿದರು. ಏನಾದರೇನು ಮನಸ್ಸಿಗೆ ಸಮಾಧಾನವಿಲ್ಲ. ಮೂಗುತಿಯ ವಿಷಯವೇ ಪುನಃ ಪುನಃ

ನೆನಪಿಗೆ ಬರುತ್ತಿತ್ತು. ಎಲ್ಲದಕ್ಕಿಂತಲೂ ಮೊದಲು ತಮ್ಮ ಪತ್ನಿಯ ಮೂಗು ತಿಯನ್ನು ನೋಡಿ ಸಂಶಯವನ್ನು ಪರಿಹರಿಸಿಕೊಳ್ಳಬೇಕೆಂದು ತಮ್ಮ ಪತ್ನಿಯು ವರಿದ್ದಲ್ಲಿಗೆ ಬಂದರು. ಆ ಸಮಯದಲ್ಲಿ ಸರಸ್ವತೀಬಾಯಿಯು ಮಡಿಯು ಟ್ಟುಕೊಂಡು, ದೇವರ ಮನೆಯಲ್ಲಿ ಕುಳಿತಿದ್ದರು. ನಾಯಕರು ಅಲ್ಲಿಗೇ ಬಂದು ತಮ್ಮ ಪತ್ನಿಯನ್ನು ಕಂಡು, 'ಆಗಲಿ, ಆಗಲಿ, ತಮ್ಮ ಅಷ್ಟಾಂಗಸಿದ್ಧಿ ಗಳೆಲ್ಲವೂ ನೆರವೇರಲಿ' ಎಂದು ಹಾಸ್ಯಮಾಡಿದರು. ನಾಯಕರ ಮಾತು ಕಿವಿಗೆ ಬಿದ್ದೊಡನೆಯೇ ಏನೋ ಧ್ಯಾನದಲ್ಲಿ ಕುಳಿತಿದ್ದ ಬಾಯಿಯವರು ತತ್ ಕ್ಷಣವೇ ಮೇಲಕ್ಕೆದ್ದು ಪಾದಗಳಿಗೆ ಹಣೆ ಹಚ್ಚಿ ನಮಸ್ಕರಿಸಿ, ಅಂಜಲಿಬದ್ಧ ರಾಗಿ ನಿಂತು 'ಪತಿದೇವಾ! ಇಂದು ಈ ಅಕಾಲದಲ್ಲಿ ಅಂಗಡಿಯನ್ನು ಬಿಟ್ಟು ಬರಲು ಕಾರಣವೇನೆಂಬುದನ್ನು ಈ ದಾಸಿಯು ತಿಳಿಯಬಹುದಾಗಿದ್ದರೆ ಮಾತ್ರ ಅಪ್ಪಣೆಕೊಡಿಸಬೇಕು' ಎಂದರು.

ನಾಯಕರು 'ನಿನಗಾಗಿಯೆ' ಎಂದು ಎವೆಯಿಕ್ಕದೆ ಹೆಂಡತಿಯ ಮುಖ ವನ್ನು ನೋಡಹತ್ತಿದರು. ಪತಿಯು ನೋಡುವ ದೃಷ್ಟಿಲಕ್ಷಣದಿಂದಲೇ ಸಾಧ್ವಿಯು ಇದು ಮೂಗುತಿಯ ವಿಷಯವಲ್ಲದೆ ಬೇರೆಯಲ್ಲವೆಂದು ನಿಶ್ಚೈಸಿ, ಭಯದಿಂದ ನಡುಗಲಾರಂಭಿಸಿದಳು. ನಾಯಕರು ಮೂಗುತಿಯನ್ನು ಕಾಣ ಲಿಲ್ಲ. ಅವರ ಕೋಪಕ್ಕೆ ಮಿತಿಯಿಲ್ಲ, 'ಮೂಗುತಿ ಎಲ್ಲಿ?' ಎಂದರು. ಸರಸ್ವತೀ ಬಾಯಿಯು ಏನುತ್ತರವನ್ನು ಕೊಡಬೇಕೆಂಬುದು ತೋರದೆ 'ಪಾಂಡುರಂಗಾ!' ಎಂದರು. ಪುನಃ ನಾಯಕರು 'ಏಕೆ? ನಿರುತ್ತರ!' ಎಂದು ಗದರಿಸಿದರು. ಆಗಲೂ ಬಾಯಿಯು ಪಾಂಡುರಂಗಾ! ಎಂದರು. ಕೇಳಬೇಕೆ? ನಾಯ ಕರು ಈಗ ಕೋಪವನ್ನು ತಡೆಯಲಾರದವರಾಗಿ, 'ಇದೇನು ನಿನಗೆ ಬುದ್ಧಿಯು ಸರಿಯಾಗಿರುವುದಷ್ಟೆ? ಕೇಳಿದ ಪ್ರಶ್ನೆಗೆ ಉತ್ತರಕೊಡದೆ ಪಾಂಡುರಂಗಾ!' ಎನ್ನುವಿಯಲ್ಲ. ಈಗ ಕೇಳುವವನು ಪಾಂಡುರಂಗನಲ್ಲ ಶ್ರೀನಿವಾಸ ಎಂದರು. ಸರಸ್ವತೀಬಾಯಿಯು 'ನಿಶ್ಚಯ, ಸಂಶಯವೇನು, ನನ್ನ ಭಾಗಕ್ಕೆ ತಾವೇ ಶ್ರೀನಿ ವಾಸ' ಎಂದರು. ನಾಯಕರು 'ನಿನ್ನ ಹೊಗಳಿಕೆಯು ನನಗೆ ಬೇಕಾಗಿಲ್ಲ. ಮೊ ದಲು ಮೂಗುತಿಯನ್ನು ತಂದುಕೊಡುವಿಯೋ? ಅಥವಾ, ಅನರ್ಥಮಾಡಬೇ ಕೆಂದಿರುವಿಯೋ?' ಎಂದರು. ಸರಸ್ವತಿಬಾಯಿಯು ಈಗೇನೆಂದು ಹೇಳಲಿ,

ಸುಳ್ಳು ಹೇಳಲೆ, ಅಥವಾ ನಿಜವನ್ನು ಹೇಳಲೆ? ಈಗ ನಾನು ಯಥಾರ್ಥವನ್ನು ಹೇಳಲು, ಪತಿಯ ಆಗ್ರಹ, ನೆರಹೊರೆಯವರಲ್ಲಿ ನಗೆಗೇಡು, ಇಷ್ಟೆಲ್ಲಾ ಅನರ್ಥವಾಗುವ ಯಥಾರ್ಥಕ್ಕಿಂತಲೂ ಸುಳ್ಳೇ ಶ್ರೇಯಸ್ಸೆಂದು ನಿಶ್ಚೈಸಿ, 'ಮೂಗುತಿಯು ಎಲ್ಲಿಯೋ ಮೈಲಿಗೆ ಕಡೆ ಇದೆ. ಮಡಿಕೆಲಸವಾದೊಡನೆಯೇ ಹುಡುಕಿ ಕೊಡುತ್ತೇನೆ' ಎಂದು ಹೇಳಿದರು. ನಾಯಕರು ಇದಕ್ಕೆ ಒಪ್ಪುವರೆ? ಇಲ್ಲ, ಇಲ್ಲ, 'ಅದಾಗದು, ಮೂಗುತಿಯನ್ನು ತಂದು ಕೊಡು, ಇಲ್ಲವೆ, ಅದಿರುವ ಸ್ಥಳವನ್ನಾದರೂ ತೋರಿಸು' ಎಂದು ನಿಷ್ಠುರದಿಂದ ಹಟಹಿಡಿದರು. ಸರಸ್ವತೀಬಾಯಿಯು 'ತಮ್ಮ ಆಜ್ಞೆಯು ಅಲಂಘನೀಯವು, ಆದರೆ ತುಲಸೀ ಪೂಜೆಯನ್ನು ಮುಗಿಸಿಕೊಂಡು ಬರುವುದಕ್ಕಾದರೂ ಅಪ್ಪಣೆಯಾಗಬೇಕು' ಎಂದು ಪ್ರಾರ್ಥಿಸಲು ನಾಯಕರು ಹೇಗೋ ಅಸ್ತುಪಟ್ಟರು.

ಬಾಯಿಯವರು ಪೂಜೋಪಕರಣಗಳನ್ನು ಸಿದ್ಧಪಡಿಸಿಕೊಂಡು ತಮ್ಮ ನಿತ್ಯಗೌರೀ ಪೆಟ್ಟಿಗೆಯನ್ನೂ ತೆಗೆದುಕೊಂಡು ತುಲಸೀಬೃಂದಾವನದ ಸಮೀಪದಲ್ಲಿ ಬಂದು ಕುಳಿತು ಏನೇನೋ ಯೋಚಿಸಿದರು. ಎಷ್ಟು ಯೋಚಿಸಿದರೂ ಏನು ಮಾಡಬೇಕೆಂಬುದು ತೋರದೆ, ಮೊದಲು ಪೂಜೆಯನ್ನು ಮುಗಿಸಿ, ನಂತರ ದೇವರು ಬುದ್ಧಿಕೊಟ್ಟಂತೆ ಮಾಡುವುದೆಂದು ಬೃಂದಾವನ ಲೋಲನಾದ ಶ್ರೀಕೃಷ್ಣನನ್ನು ಪೂಜಿಸಿ, ನಂತರ ಹೀಗೆಂದು ನಿಶ್ಚೈಸಿದರು. ಮೂಗುತಿಯನ್ನು ಕೊಡದಿರಲು ಬೇರೆ ಸಾಧ್ಯವಿಲ್ಲ. ಬೀದಿರಂಪ ಹಾದಿರಂಪಾಗದೇ ಇರುವುದಿಲ್ಲ, ಕಂಡವರೆದುರಿಗೆಲ್ಲಾ ಬೈಸಿಕೊಂಡು ಹೊಡೆಸಿಕೊಂಡು ಹರಣ ಮಾಡಿಕೊಂಡು ಜೀವಿಸುವುದಕ್ಕಿಂತಲೂ ಪ್ರಾಣತ್ಯಾಗ ಮಾಡುವುದೇ ಲೇಸೆಂದುಕೊಂಡರು. ಹಾಗೆಂದು ಪತಿಯಿಂದ ತೀಕ್ಷ್ಣತರಾವರ ಅದರಿಂದ ತಮಗವಮಾನವೆಂದು ತಿಳಿಯುವರಲ್ಲವೆಂಬುವ ವಿಷಯವು ಈ ಮೊದಲೇ ಬಂದುದು ವಾಚಕರ ನೆನಪಿನಲ್ಲಿರಬಹುದು. ಪರಂತು, ತಮ್ಮ ಸಂಸಾರದ ಗುಟ್ಟು ಹೊರಬೀಳುವುದೆಂತಲೂ ತಮ್ಮ ಪತಿಯನ್ನು ಯಾರಾದರೂ ದೂಷಿಸಬಹುದೆಂತಲೂ, ತಮ್ಮ ಮೂಗುಬೊಟ್ಟಿನಲ್ಲಿರುತ್ತಿದ್ದ ವಜ್ರವನ್ನರೆದು ಕುಡಿಯುವುದೇ ಸರಿ! ಎಂದು ನಿರ್ಧರಿಸಿ, ಹೇ ಪಾಂಡುರಂಗಾ! ಮಂಗಲಕಾರ್ಯಕ್ಕೆ ಕೊಟ್ಟ ದಾನವು ಗುಟ್ಟಾಗಿಯೇ ಇರಲಿ, ಇದೋ ಈ ದೇಹವನ್ನು ಈಗ ನಿನ್ನ ಪಾದಾರವಿಂದಗಳಿಗೆ ಸಮರ್ಪಿಸುವೆನು, ಇದರಿಂದ ಆತ್ಮಹತ್ಯಾದೋಷವು ಬೇರೆ

ಬಾರದಷ್ಟೆ, ಎಂದಾದರೊಂದುದಿನ ವೃಥಾ ಬಿದ್ದು ಹೋಗುವ ನಶ್ವರವಾದ ಈ ದೇಹವು ಪರೋಪಕಾರಕ್ಕಾಗಿ ಸಾರ್ಥಕವಾಗಲಿ, ವಿಟ್ಠಲಾ! ನನ್ನ ಕೊನೆಯ ಈ ಎರಡು ಬಯಕೆಗಳನ್ನು ಮಾತ್ರ ಅನುಗ್ರಹಿಸು. ನನ್ನ ಪತಿದೇವನಿಗೆ ಧರ್ಮಬುದ್ಧಿಯುಂಟಾಗುವಂತೆಯೂ, ಜನ್ಮ ಜನ್ಮದಲ್ಲಿಯೂ ನಿನ್ನ ಪಾದಾರವಿಂದದಲ್ಲಿ ಭಕ್ತಿಯಿರುವಂತೆಯೂ, ಇಷ್ಟನ್ನು ಮಾತ್ರ ನಡೆಯಿಸಿ ಕೊಡು, ಇದೋನಿನ್ನ ಪಾದಾರವಿಂದಗಳಿಗೆ ಅನಂತಾನಂತ ಪ್ರಣಾಮಗಳು, ಎಂದು ವಜ್ರದ ಹಲ್ಲೆಯನ್ನರೆದು ಸಿದ್ಧಪಡಿಸಿದರು.

ಇತ್ತ ಭಕ್ತಪರಾಧೀನನಾದ ಪಾಂಡುರಂಗನು ಓಹೋ! ಈ ಭಕ್ತಳು ಆತ್ಮಾರ್ಪಣಕ್ಕೂ ಸಿದ್ಧಳಾದಳು. ಈ ಸಮಯದಲ್ಲಿ ಇನ್ನೂ ಸಾವಕಾಶಮಾಡಲು ಭಗವತ್ಪ್ರೀತಿಗೆಂದು ಪರೋಪಕಾರಬುದ್ಧಿಯಿಂದ ದಾನ ಮಾಡಿದವರಿಗೆ ಕೊನೆಗೆ ಸಿಕ್ಕುವ ಫಲವಾವುದೆಂದರೆ, ಪ್ರಾಣತ್ಯಾಗವೆಂಬುವ ಭಯಂಕರ ಅಮಂಗಲ ಶಬ್ದವು ಸಿಂತಲ್ಲಿ ಇನ್ನುಮುಂದೆ ಪರೋಪಕಾರ, ದಾನ, ಧರ್ಮಗಳೆಂಬುದು ನಾಮಾವಶೇಷವಾದೀತೆಂದು ತನ್ನ ಭಕ್ತಳನ್ನು ಉದ್ಧರಿಸಲೋಸುಗ ಸಂಕಲ್ಪಿಸಿ, ತಾನೂ ಸಿದ್ಧನಾದನು.

ವಿಷದ ಪಾತ್ರೆಯನ್ನು ತೆಗೆದುಕೊಂಡು ಕುಡಿಯಲೆತ್ನಿಸಿ ಬಾಯಿಗೆ ಸುರಿದುಕೊಳ್ಳುವಷ್ಟರಲ್ಲಿ ಪಾತ್ರೆಯಲ್ಲಿ ಏನೋ ಬಿದ್ದಂತೆ ಟಿಕ್ ಎಂದು ಸದ್ದಾಯಿತು. ಅದೇನೆಂದು ನೋಡುವಾಗ ಕೈಗೆ ಏನೋ ತಗಲಿತು. ತೆಗೆದು ಕೊಂಡು ನೋಡಲು ಮೂಗುತಿ.

ಯಾವ ಮೂಗುತಿ? ಅದೇ ಮೂಗುತಿ. ಬ್ರಾಹ್ಮಣನಿಗೆ ಕೊಟ್ಟ ಮೂಗುತಿ, ತನ್ನ ಸ್ವಂತವಾಗಿದ್ದ ಮೂಗುತಿ, ಲಕ್ಷ್ಮೀಪತಿಯನ್ನೂ ಭಿಕ್ಷೆ ಬೇಡಿಸಿದ ಮೂಗುತಿ, ಅಪ್ರಾಕೃತನನ್ನು ಪ್ರಾಕೃತರಂತೆ ಗೈದ ಮೂಗುತಿ. ಅಮೌಲ್ಯವಾದ ಮೂಗುತಿ, ಆಶ್ಚರ್ಯವನ್ನುಂಟುಮಾಡುವ ಮೂಗುತಿ, ನಾಯಕರು ಅಪೇಕ್ಷೆಪಟ್ಟ ಮೂಗುತಿ, ಸರಿಯಿಲ್ಲದ ಮೂಗುತಿ, ಹರಿಯೊಲಿಯುವ ಮೂಗುತಿ, ಪರಲೋಕಸಾಧನವನ್ನು ಮಾಡಿಸುವ ಮೂಗುತಿ, ಸತಿ ಪತಿಗಳಿಗೆ ಹಿತವನ್ನುಂಟುಮಾಡುವ ಮೂಗುತಿ, ರತಿಪತಿಪಿತನೊಲಿಯುವ ಗತಿದೋರುವ ಮೂಗುತಿ, ಮುತ್ತಿನ ಮೂಗುತಿ, ಮುತ್ತೈದೆಯರಿಗೆ ಮೂಲಾ

ಧಾರದ ಮೂಗುತಿ, ಶ್ರೀಹರಿಗಿತ್ತ ಮೂಗುತಿ, ಶ್ರೀಹರಿಯೇ ತಂದಿತ್ತ ಮೂಗುತಿ, ಇಂತಹ ಮೂಗುತಿಯನ್ನು ಕಂಡಮಾತ್ರದಿಂದಲೇ ಅತ್ಯಾಶ್ಚರ್ಯಗೊಂಡು, ನಾನಾಪ್ರಕಾರವಾಗಿ ಮೂಗುತಿಯ ಗುಣಾನುವರ್ಣನಮಾಡುತ್ತಾ ಒಂದು ಘಳಿಗೆಯ ಪರಿಯಂತರ ಸ್ತಬ್ಧಳಾಗಿ ನಿಂತಿದ್ದು ಇದು ಪಾಂಡುರಂಗನ ಕೃತ್ಯ ವಲ್ಲದೆ ಬೇರೆಯಲ್ಲವೆಂದು ನಿಶ್ಚೈಸಿ, ಅಡಿಗಡಿಗೂ ಪರಮಾತ್ಮನ ರೂಪಕ್ರಿಯೆ ಗಳನ್ನು ಚಿಂತಿಸುತ್ತಾ, ಭಕ್ತಿಭಾವದಿಂದ ಹೇ ಪಾಂಡುರಂಗಾ! ಹೇ ಪಾಂಡು ರಂಗಾ!! ಎಂದು ನಾಮಸ್ಮರಣೆಮಾಡುತ್ತಾ ತನಗೆ ತಾನೇ ಧನ್ಯವಾದವನ್ನು ಮಾಡಿಕೊಳ್ಳುತ್ತಾ ವಿಠ್ಠಲ! ಮತ್ತೊಮ್ಮೆ ಹಿಂದೆ ಯಾವ ರೂಪದಿಂದ ಬಂದು ಯಾಚಿಸಿದೆಯೋ ಅದೇ ರೂಪದಿಂದ ದರ್ಶನವನ್ನು ಕೊಟ್ಟು ಸಂತೋಷಪಡಿ ಸಲಾರೆಯಾ? ಎಂದು ಭಕ್ತಿಪರವಶಳಾಗಿ ಬಿಕ್ಕಿ ಬಿಕ್ಕಿ ಅತ್ತು, ದೇವಾ! ಸಮೀ ಪದಲ್ಲಿ ಬಂದಾಗಲೂ ತಿಳಿಯಲಾರದವಳಾದೆನಲ್ಲಾ! ಬ್ರಹ್ಮಾದಿಗಳೇ ತಿಳಿಯ ಲಾಗದ ನಿನ್ನ ಮಾಯೆಯನ್ನು ತೃಣಜೀವಿಯಾದ ನಾನು ತಿಳಿಯಬಲ್ಲೆನೆ? ಆಗಲಿ, ದೀನ ದಾಸಿಯನ್ನು ಕೈಬಿಡಬೇಡ, ಎಂದು ಭಗವಂತನನ್ನು ಸ್ಮರಿಸುತ್ತಾ ಬ್ರಹ್ಮಾನಂದದಿಂದ ಮುಹೂರ್ತಕಾಲ ಪರವಶಳಾಗಿ, ಬಹಿರ್ಮುಖಳಾಗು ತ್ತಲೇ, ಪತಿದೇವನ ಆಜ್ಞೆಯನ್ನು ನೊಡಲು ನೆರವೇರಿಸಬೇಕೆಂದು ಮೂಗುತಿ ಯನ್ನು ತಂದುಕೊಟ್ಟಳು. ನಾಯಕರಿಗೆ ಬೇಕಾದುದು ಮೂಗುತಿಯೆ, ನೋಡಿದೊಡನೆ ಸಂತೋಷಪಟ್ಟರು.

## ಈಗ ಶುದ್ಧಾಂತಃಕರಣ.

ನಾಯಕರು ತಮ್ಮಲ್ಲಿರುವ ಮೂಗುತಿಯನ್ನೂ ಇದನ್ನೂ ಜೊತೆಗೋಳಿಸಿ ವಿಕ್ರಯಿಸಿ ಹೆಚ್ಚು ಲಾಭವನ್ನು ಹೊಂದಬೇಕೆಂದು ಅಂಗಡಿಗೆ ಬಂದು ಮೂಗು ತಿಯನ್ನಿಟ್ಟಿದ್ದ ಪೆಟ್ಟಿಗೆಯ ಮೊಹರೊಡೆದು ಬಾಗಿಲು ತೆಗೆದು ಭರಣಿಯ ಮುಚ್ಚಳವನ್ನು ತೆಗೆದು ನೋಡಲು, ಮೂಗುತಿಯು ಇರಲಿಲ್ಲ. ಪುನಃ ಪುನಃ ನೋಡಿದರೂ ಇಲ್ಲ. ಭ್ರಮೆಯಿಂದ ಬೇರೆ ಯಾವ ಸಂದೂಕದಲ್ಲಾದರೂ ಇರಿಸಿದ್ದೇನೊ? ಎಂಬುವ ಅನುಮಾನದಿಂದ ಅಂಗಡಿಯನ್ನೆಲ್ಲಾ ಗಲಬರಿಸಿ ಹುಡುಕಿದರು. ಎಷ್ಟು ಹುಡುಕಿದರೂ ಇಲ್ಲದಿರುವುದು ಸಿಕ್ಕುವುದು ಹೇಗೆ?

ಇಲ್ಲವೇ ಇಲ್ಲ. ಒಂದೇ ಒಂದು ಕಾಸೆಂದರೂ ತಮ್ಮ ಪ್ರಾಣಕ್ಕಿಂತಲೂ ಹೆಚ್ಚೆಂದು ತಿಳಿದಿರುವಾಗ, ಅಮೌಲ್ಯವಾದ ಮೂಗುತಿಯೇ ಕಾಣಲಿಲ್ಲವೆಂದರೆ ಹೇಗಿರಬೇಕು? ಗಾಬರಿಗೊಂಡು ಬೆಚ್ಚಿಬಿದ್ದರು. ಅವರ ಆಗಿನ ಸ್ಥಿತಿಯನ್ನು ಅವರೇ ಬಲ್ಲರು. ಅಥವಾ ಅವರಂತಿರುವ ಲುಬ್ಧರು ಮಾತ್ರ ತಿಳಿಯಬಲ್ಲರು, ತಲೆಯಮೇಲೆ ಕೈಯಿಟ್ಟುಕೊಂಡು ಸ್ವಲ್ಪಹೊತ್ತು ಕುಳಿತರು. ನಾನಾ ಪ್ರಕಾರವಾಗಿ ಯೋಚಿಸಲಾರಂಭಿಸಿದರು. ಪೆಟ್ಟಿಗೆಯಲ್ಲಿ ಬಂದೋಬಸ್ತಾಗಿಟ್ಟು, ಮೊಹರ್‌ಮಾಡಿ ಈಗ ತಾನೆ ಮನೆಗೆ ಹೋಗಿರುತ್ತೇನೆ, ಉದಾಸೀನ ಮಾಡದೆ ಮನೆಗೆ ಹೊರಡುವಾಗಲೂ ಜ್ಞಾಪಕದಿಂದ ಮತ್ತೊಮ್ಮೆ ನೋಡಿರುತ್ತೇನೆ, ಇಷ್ಟರೊಳಗಾಗಿ ಮೊಹರ್ ಸರಿಯಾಗಿಯೇ ಇದ್ದು, ಮೂಗುತಿಯು ಮಾತ್ರ ಕಾಣದಿರುವುದೆಂದರೆ, ಪರಮಾಶ್ಚರ್ಯವಾಗಿದೆ. ಇದರ ಮೇಲೂ ಹಾಡೆ ಹಗಲು, ಈ ಕಾರಣವನ್ನು ಏನೆಂದು ಊಹಿಸಲಿ, ಅಂತೂ ಎಷ್ಟು ಯೋಚಿಸಿದರೂ ಇದು ಮನುಷ್ಯಕೃತ್ಯ ಜೇರೆಯಲ್ಲ. ಇರಲಿ, ಯಾವ ವಿಚಾರವನ್ನೂ ತಮ್ಮ ಪತ್ನಿಯಿಂದಲೇ ತಿಳಿದುಕೊಳ್ಳಬೇಕೆಂದು ಮನೆಗೆ ಬಂದರು.

ಸರಸ್ವತೀಬಾಯಿಯನ್ನು ಕಂಡು, ಈಗ ನಿನ್ನಿಂದ ಒಂದು ಸಂದೇಹವು ಪರಿಹಾರವಾಗಬೇಕಾಗಿದೆ, ಕೇಳು? ನೀನು ತುಲಸೀಪೂಜೆಯನ್ನು ಮಾಡಿ ಮೈಲಿಗೆಯಲ್ಲಿರುವ ಮೂಗುತಿಯನ್ನು ಹುಡುಕಿಕೊಡುತ್ತೇನೆಂದು ಹೇಳಿದವಳು ಎಲ್ಲಿಯೂ ಹುಡುಕದೆ ತುಲಸೀಬೃಂದಾವನದಿಂದ ಬಂದಕೂಡಲೇ ನನಗೆ ಮೂಗುತಿಯನ್ನು ಕೊಟ್ಟೆಯಲ್ಲವೆ? ಇದಲ್ಲದೆ ಈಗ ಸ್ವಲ್ಪಹೊತ್ತಿನ ಮೊದಲು ಒಬ್ಬ ವ್ಯಾಪಾರಿಯು ಇದರಂತೆಯೇ ಇರುವ ಮತ್ತೊಂದು ಮೂಗುತಿಯನ್ನು ತಂದುಕೊಟ್ಟಿದ್ದನು. ಅದನ್ನು ಮೊಹರ್‌ಮಾಡಿ ಅಂಗಡಿಯಲ್ಲಿಟ್ಟು ಬಂದುದನ್ನು ಈಗ ಹೋಗಿನೋಡಲು ಮೊಹರ್ ಇದ್ದಹಾಗೆಯೇ ಇದ್ದು, ಮೂಗುತಿಯು ಮಾತ್ರ ಇಟ್ಟಲ್ಲಿಯೇ ಮಟ್ಟಮಾಯವಾಗಿದೆ. ಇದೆಲ್ಲಕ್ಕಿಂತಲೂ ಆಶ್ಚರ್ಯವಾದ ಮತ್ತೊಂದು ವಿಚಾರ. ಮೂಗುತಿಯನ್ನು ವಿಕ್ರಯಿಸಿದ ಮನುಷ್ಯನು ವಿಟ್ಠಲ ದೇವರ ಗುಡಿಯಲ್ಲಿ ದೇವರನ್ನು ಆಲಂಗಿಸಿದವನು ಅಲ್ಲಿಯೇ ಅದೃಶ್ಯನಾದನಂತೆ. ಈ ಎಲ್ಲಾ ಕಾರಣಗಳನ್ನು ಯೋಚಿಸುವಾಗ

ನನ್ನ ಮನಸ್ಸಿಗೆ ನಾನಾ ಪ್ರಕಾರವಾಗಿ ತೋರುವುದು. ಈ ಕಾರ್ಯಕಾರಣ ಸಂದರ್ಭ ತಿಳಿಯದಿದ್ದರೂ, ನನ್ನ ಮನಸ್ಸೇನೋ ನನ್ನಧೀನವಿಲ್ಲ. ಸಂಪೂರ್ಣ ಬದಲಾಯಿಸಿದೆ. ಇಂದು ಯಾವ ವಿಷಯದಲ್ಲಿಯೂ ಆಸೆಯಿಲ್ಲ. ಸಕಲೈಶ್ವರ್ಯದಲ್ಲಿಯೂ, ಐಶ್ವರ್ಯದ ಮಾತು ಹಾಗಿರಲಿ, ನನ್ನ ದೇಹದಲ್ಲಿಯೂ ಕೂಡಾ ಅಭಿಮಾನ ಕಡಿಮೆಯಾಗಿದೆ. ಈ ಸಂದರ್ಭವೆಂತಹುದೆಂದು ತಿಳಿಸಲಾರೆಯಾ! ಎಂದರು.

ಬಾಯಿಯವರು ಈ ವಿಷಯಗಳನ್ನು ಕೇಳಿ ಪರಮಾಶ್ಚರ್ಯದಿಂದ ನಾನಾ ವಿಧವಾಗಿ ಯೋಚಿಸುತ್ತಾ ಯಾವ ಮಾತನ್ನೂ ಆಡದೆ ಸುಮ್ಮನಿದ್ದರು. ನಾಯಕರು, "ಏಕೆ ಮಾತನಾಡದಿರುವೆ? ಯಾವಾಗಲೂ ನನಗೆ ಧರ್ಮಬೋಧನೆ ಮಾಡುತ್ತಿದ್ದ ನೀನು, ಇಂದೇಕೆ ಮೌನ ವ್ರತವನ್ನು ಕೈಗೊಂಡಿರುವೆ? ಪರಿಹಾಸ್ಯ ಮಾಡುತ್ತಾನೆಂದು ತಿಳಿದೆಯಾ! ಇಲ್ಲ, ಇಲ್ಲ, ಇಂದು ಪರಿಹಾಸ್ಯವಲ್ಲ. ನಿನಗಾಸಂದೇಹವು ಬೇಡ. ಇಂದು ನಾನು ನಾನಾಗಿಲ್ಲ, ನಾಯಕನಿಗೆ ಎಲ್ಲ ವಿಷಯದಲ್ಲಿಯೂ ಬೇಸರಹುಟ್ಟಿದೆ, ನೀನು ಹಿಂದೆ ಬೋಧಿಸುತ್ತಿದ್ದಂತೆ ತನು, ಮನ, ಧನ, ದಾರಾಪುತ್ರಾದಿ ಸಕಲವೂ ನಶ್ವರವೆಂಬುವ ವಿಷಯವು ನಿಜವೆಂದು ತೋರುತ್ತಿದೆ, ಇನ್ನೂ ಏತಕ್ಕಾಗಿ ಅನುಮಾನಿಸುವೆ? ಮರೆಮಾಚದೆ ನನಗಿರುವ ಸಂದೇಹವನ್ನು ಪರಿಹರಿಸು. ಇನ್ನು ನನ್ನ ಮನಸ್ಸನ್ನು ಬಿಗಿ ಹಿಡಿಯಲಾರೆ" ಎಂದು ಬಿಕ್ಕಿ ಬಿಕ್ಕಿ ಅತ್ತುಬಿಟ್ಟರು.

ಸರಸ್ವತೀಬಾಯಿಯವರು ಪತಿಗುಂಟಾದ ಪಶ್ಚಾತ್ತಾಪಕ್ಕಾಗಿ ಮರುಕಗೊಂಡು, ದಯಾಳುವಾದ ಭಗವಂತನೆ! ಎಷ್ಟು ಬೇಗನೆ ಪತಿದೇವನ ಮನಸ್ಸಿನ ಪರಿಸ್ಥಿತಿಯನ್ನು ಬದಲಾಯಿಸಿದೆ! ಎಂದು ಅನಂತಾನಂತ ಪ್ರಣಾಮಗಳನ್ನು ಸಮರ್ಪಿಸಿ, "ನಾಥ! ಇದೇಕೆ ಒಮ್ಮಿಂದೊಮ್ಮೆ ರೋದಿಸುವಿರಿ? ನನಗೆ ತಿಳಿದ ಯಥಾರ್ಥವಾದ ಸಂಗತಿಯನ್ನು ವಿಜ್ಞಾಪಿಸುವೆನು, ಇದರಿಂದ ತಮ್ಮ ಸಂದೇಹವು ಪರಿಹಾರವಾಗುವುದಾದರೆ ಯೋಚಿಸೋಣವಾಗಲಿ" ಎಂದು ಬ್ರಾಹ್ಮಣನು ತನ್ನಲ್ಲಿ ಬಂದು ಯಾಚಿಸಿದ ಮೊದಲು ಏತತ್ಕಾಲ ಪರಿಯಂತ ನಡೆದ ಎಲ್ಲಾ ವಿಚಾರಗಳನ್ನು ತಿಳುಹಿಸಿದರು.

ಇದನ್ನು ಕೇಳಿ ನಾಯಕರಿಗೆ ಪರಮಾಶ್ಚರ್ಯವಾಯಿತು. ಸತಿಪತಿಗಳಿಬ್ಬರೂ ಪರವಶರಾದರು. ಯಾವ ಮಾತನ್ನೂ ಆಡದೆ ಮುಹೂರ್ತಕಾಲ

ಸುಮ್ಮನಿದ್ದರು. ನಾಯಕರು ತಮ್ಮಷ್ಟಕ್ಕೆ ತಾವೇ ಹೀಗೆಂದುಕೊಂಡರು. ಹೇ ಪಾಂಡುರಂಗಾ! ಬ್ರಾಹ್ಮಣನಾಗಿ ಬಂದು ಯಾಚಿಸಿದವನೂ, ವ್ಯಾಪಾರಿಯಾಗಿ ಬಂದು ಮೂಗುತಿಯನ್ನು ವಿಕ್ರಯಿಸಿದವನೂ, ನಿನ್ನ ಭಕ್ತಳ ಪ್ರಾಣರಕ್ಷಣೆಗಾಗಿ ವಿಷದ ಪಾತ್ರೆಯಲ್ಲಿ ಮೂಗುತಿಯನ್ನು ತಂದು ಹಾಕಿದವನೂ, ಅಂಗಡಿಯಲ್ಲಿ ಇಟ್ಟಲ್ಲಿಯೇ ಮೂಗುತಿಯನ್ನು ಮಟ್ಟವಾಯ ಮಾಡಿದವನೂ, ನನ್ನನ್ನು ಮಾಯಾಜಾಲದಲ್ಲಿ ಮೋಹಗೊಳಿಸಿದವನೂ, ಎಲ್ಲವೂ ನೀನೆ. ನನ್ನ ಪತ್ನಿಗೆ ಲಭಿಸಿದ ಭಾಗ್ಯವು ನನಗೆ ಲಭಿಸದೆ ಹೋಯಿತೆ? ನನ್ನಂತಹ ಪಾಪಿಗೆ ಹೇಗೆ ತಾನೆ ಲಭಿಸೀತು! ಎಂದು ಹಂಬಲಿಸಿದರು. ಲಕ್ಷ್ಮೀಪತಿಯಾಗಿ ಬ್ರಹ್ಮಾಂಡವನ್ನು ಧರಿಸಿ, ಬ್ರಹ್ಮಾಂಡದಲ್ಲಿ ವ್ಯಾಪ್ತನಾಗಿ ಸಕಲ ಪ್ರಾಣಿಗಳಿಗೂ ಕಾಲಕಾಲಕ್ಕೆ ಅಪೇಕ್ಷಿಸಿದುದನ್ನು ಒದಗಿಸಿಕೊಟ್ಟು, ಸಂತೋಷಪಡಿಸುವ ನೀನೇ ಅಲ್ಪನಾದ ನನ್ನಲ್ಲಿ ಬಂದು ಯಾಚಿಸಿದಾಗ ಪರಮ ಲೋಭಿಯಾದ ನಾನು ಪರೋಪಕಾರದಲ್ಲಿ ಕಿಂಚಿತ್ತಾದರೂ ಮನಸ್ಸಿಲ್ಲದವನಾಗಿ ನಶ್ವರವಾದ ಭಾಗ್ಯವು ಸ್ಥಿರವಾಗಿ ನನ್ನದೇ ಎಂದು ಮರುಳಾಗಿ ನೀನು ಕೊಟ್ಟ ಭಾಗ್ಯವನ್ನು ನಿನ್ನಲ್ಲರ್ಪಿಸಿ, ನಿನ್ನ ಸೇವೆಯನ್ನು ಮಾಡಿ ಧನ್ಯನಾಗದೇ ಹೋದೆನಲ್ಲಾ! ನಾನೆಂತಹ ಧರ್ಮದ್ರೋಹಿ! ಅಯ್ಯೋ! ಹಾಳಾದ ಐಶ್ವರ್ಯವೆ? ಧನಪಿಶಾಚಗ್ರಸ್ತನಾದಾಗ ಬಡವರಲ್ಲಿ ನಿರ್ಲಕ್ಷ್ಯ, ಸುಖದುಃಖದ ಯೋಚನೆಯೇ ಇಲ್ಲ, ಪರೋಪಕಾರದಲ್ಲಿ ಶೂನ್ಯ, ಪ್ರಾಣಿಗಳಲ್ಲಿ ನಿರ್ದಯೆ, ಯಾಚಕರನ್ನು ಕಂಡರೋ ಯಮದೂತರನ್ನು ಕಂಡಷ್ಟು ಭಯ. ಆಹಾ! ಹಾಳಾದ ಐಶ್ವರ್ಯವೆ? ಇಷ್ಟು ಅನರ್ಥಗಳಿಗೂ ಕಾರಣವಾದುದು ಐಶ್ವರ್ಯವಲ್ಲವೆ? ಧನಮದಾಂಧನಾದವನು ಉನ್ಮತ್ತನಾಗಿ ಭಗವಂತನನ್ನೂ ಭಗವದ್ಭಕ್ತರನ್ನೂ ಅಲಕ್ಷಿಸಿ ನರಕಭಾಜನನಾಗುವನು. ಇಂಥವನ ಬಾಳಿಗೆ ಧಿಕ್ಕಾರ, ಧಿಕ್ಕಾರವಿರಲಿ, ಎಂದು ತಮ್ಮನ್ನು ತಾವೇ ಹೀಯಾಳಿಸಿಕೊಂಡರು.

ಹೇ ಪಾಂಡುರಂಗಾ! ದಯಾಮಯಾ! ಈ ಪಾಪಿಯ ಅಪರಾಧಗಳನ್ನು ಕ್ಷಮಿಸಲಾರೆಯಾ! ಪಾಮರನನ್ನು ಉದ್ಧರಿಸಲಾರೆಯಾ! ಛಿ! ಛಿ! ಈ ನಿರ್ಭಾಗ್ಯನ ಉದ್ಧಾರವೆ? ವಶವರ್ತಿಯಾದ ಸೂರ್ಯದೇವನನ್ನು ಅಲಕ್ಷಿಸಿದ ಬಳಿಕ ಮಿಣುಕು ಹುಳುವನ್ನಾಶ್ರಯಿಸಲು ಬೆಳಕನ್ನು ಕೊಡಬಲ್ಲದೆ? ಸ್ವಾಮಿಯೇ

ತನಗೆ ತಾನಾಗಿ ಇದುರಿಗೆ ಬಂದಾಗಲೂ ಘಟ್ಟಿಯಾಗಿ ಪಾದಾರವಿಂದವನ್ನು ಹಿಡಿದುಕೊಂಡು ಅನುಗ್ರಹವನ್ನು ಸಂಪಾದಿಸದ ಬಳಿಕ ಇನ್ನು ಉದ್ಧಾರವೆ? ಇಲ್ಲ, ಇಲ್ಲ, ಇನ್ನು ಆ ಆಸೆಯೇ ಇಲ್ಲ. ಏಕೆ? ಏತಕ್ಕಾಗಿ ಇಲ್ಲ! ನಾನು ಪತಿತನಾದರೂ ಸ್ವಾಮಿಯು ಪತಿತಪಾವನನಲ್ಲವೆ? ನಾನು ಪಾಪಿಯಾದರೂ ಹರಿನಾಮ ಸಂಕೀರ್ತನೆಯಿಂದಲೂ ಭಸ್ಮವಾಗದಿರುವ ಪಾಪ ಉಂಟೆ? ನಾನು ಕಠಿನನಾದರೂ ಸ್ವಾಮಿಯು ದಯಾಮಯನಲ್ಲವೆ? ಕರುಣಾಸಮುದ್ರನೆಂಬುವ ಬಿರುದು ನನಗಾಗಿ ಬಿಟ್ಟುಬಿಡುವನೇ? ಹಾಗಾದಮೇಲೆ ನನ್ನ ಉದ್ಧಾರವಾಗಲೇಬೇಕು. ಹೇ ಪಾಂಡುರಂಗಾ! ದೀನ ದಯಾಪರ! ಪತಿತ ಪಾವನ! ಆರ್ತತ್ರಾಣಪರಾಯಣ! ನೀನು ಅಂಗಡಿಗೆ ಯಾವ ರೂಪದಿಂದ ಬಂದು ಯಾಚಿಸಿದೆಯೋ ಅದೇ ರೂಪದಿಂದ ಇನ್ನೊಮ್ಮೆ ಬಂದು ದರ್ಶನವನ್ನಿತ್ತು ಕಾಪಾಡು. ಹಾಗೆಂದಿಗೂ ನಿನ್ನ ದರ್ಶನವನ್ನು ಕೊಡದಿರಲು ಈ ಘಟವನ್ನು ನಿನ್ನ ಪಾದಕ್ಕರ್ಪಿಸುನೆನು, ಎಂದು ದೇಹಾಭಿಮಾನವನ್ನು ಕೂಡಾ ತೊರೆದು ಅನ್ನಪಾನಾದಿಗಳನ್ನು ಬಿಟ್ಟು ಹರಿನಾಮ ಸ್ಮರಣೆಯಲ್ಲಿ ಕುಳಿತರು.

ಸರಸ್ವತೀಬಾಯಿಯು ಪಶ್ಚಾತ್ತಾಪದಿಂದ ಶುದ್ಧಾಂತಃಕರಣನಾದ ಪತಿದೇವನ ಮನಸ್ಸಿನ ಪರಿಸ್ಥಿತಿಯನ್ನು ನೋಡಿ, ಪರಮಾನಂದಪಡುತ್ತಾ ಹೇ ಪಾಂಡುರಂಗಾ! ಎಂದು ಮತ್ತು ಮತ್ತು ಪತಿದೇವನ ಮುಖವನ್ನೇ ನೋಡಿದರು. ನೋಡನೋಡುತ್ತಿದ್ದ ಹಾಗೆಯೇ, ಆಕೆಯ ಕಣ್ಣುಗಳಲ್ಲಿ ನೀರು ತುಂಬಿತು, ರೋಮಾಂಚವಾಯಿತು, ಮಾತನಾಡಲು ಗಂಟಲು ಬಿಗಿಯಿತು, ಮನಸ್ಸಿನಲ್ಲಿಯೇ ಅನೇಕ ಸಾರಿ ಹರಿನಾಮ ಸ್ಮರಣೆ ಮಾಡುತ್ತಾ, ಆನಂದನಿರ್ಭರಮಗ್ನಳಾದಳು. ಪತಿದೇವನೇ! ಅನ್ನೋದಕವನ್ನು ತೊರೆದಿರುವಾಗ ಸಹಧರ್ಮಿಣಿಯಾದ ಸರಸ್ವತೀಬಾಯಿಯೂ ಪತಿಯ ಮಾರ್ಗವನ್ನೇ ಅನುಸರಿಸಿದಳು. ಅಂತೂ ಸತಿಪತಿಗಳಿಬ್ಬರೂ ಶ್ರೀಹರಿ ಧ್ಯಾನದಲ್ಲಿ ಕುಳಿತರು. ಹೀಗೆ ಮೂರು ದಿನಗಳು ಕಳೆದವು, ನಾಯಕರಿಗೆ ದೇಹದಲ್ಲಿ ತ್ರಾಣಗುಂದಿತು, ಅಸ್ವಾವಸ್ಥೆಗಿಟ್ಟಿತು. ಪರಂತು, ಸರಸ್ವತೀಬಾಯಿಗೆ ಮಾತ್ರ ಉಪವಾಸ ನಿಯಮನಿಷ್ಠೆಗಳಲ್ಲಿ ಮೊದಲಿಂದಲೂ ಅಭ್ಯಾಸವಿದ್ದಿತಾದುದರಿಂದ ಅಷ್ಟು ನಿತ್ರಾಣವಾದಂತೆ ತೋರಲಿಲ್ಲ. ಎಷ್ಟು ನಿತ್ರಾಣವಾದರೇನು? ನಾಯಕರು ಹರಿನಾಮಸಂಕೀರ್ತನೆಯನ್ನೇನೋ ಬಿಡಲಿಲ್ಲ.

ನಾಲ್ಕನೇ ದಿವಸ ಪ್ರಾತಃಕಾಲ ಸರಸ್ವತೀಬಾಯಿಯು ನಿತ್ಯನಿಯಮದಂತೆ ತುಲಸೀಪೂಜೆಗೆ ಬಂದು ಶುದ್ಧಾಂತಃಕರಣದಿಂದ ವೃಂದಾವನ ಲೋಲನಾದ ಶ್ರೀಕೃಷ್ಣನನ್ನು ಧ್ಯಾನಿಸುತ್ತಾ ಅನನ್ಯಭಾವದಿಂದ ಕುಳಿತಿರಲು ಭಗವಂತನು ಬ್ರಾಹ್ಮಣ ರೂಪದಿಂದ ಪ್ರತ್ಯಕ್ಷನಾದನು. ಒಡನೆಯೇ ಅತ್ಯಂತ ಸಂತೋಷ ದಿಂದ ಧಾರಾಕಾರವಾಗಿ ಬರುತ್ತಿರುವ ಆನಂದಾಶ್ರುವಿನಿಂದಲೇ ಭಕ್ತಿಯಿಂದ ಆತನ ಶ್ರೀಪಾದಗಳನ್ನು ತೊಳೆದು ಮೈಮರೆದು ಶ್ರೀಹರಿಯ ಮುಂದೆ ನರ್ತನ ಮಾಡಲಾರಂಭಿಸಿದಳು. ಆಗಳಿನ ಆಕೆಯ ಸಂತೋಷ ಸ್ಥಿತಿಯನ್ನು ವಾಚಕರೇ ಊಹಿಸಿ ತಿಳಿಯತಕ್ಕದ್ದು.

ಸ್ವಾಮಿಯು "ಇದೋ ನಿನ್ನ ಭಕ್ತಿಗಾಗಿ ಮೆಚ್ಚಿರುವೆನು. ಏತಕ್ಕಾಗಿ ಸ್ಮರಿಸಿದೆ?" ಎಂದನು. ಬಾಯಿಯು 'ಸ್ವಾಮಿಯೇ! ಇನ್ನೂ ಪರೀಕ್ಷಿಸುವೆಯಾ! ಸರ್ವಾತ್ಮಕನಾಗಿ ಪ್ರೇರ್ಯಪ್ರೇರಕ ಕಾರ್ಯ ಕಾರಣ ಬಾಧ್ಯ ಬಾಧಕನಾದ ನಿನಗೆ ನನ್ನ ಅಪೇಕ್ಷೆಯು ತಿಳಿಯದೆ? ಆಗಲಿ, ನನ್ನ ಮುಖದಿಂದಲೇ ಹೇಳಿಸಬೇಕೆಂದು ನಿನ್ನ ಸಂಕಲ್ಪವಿರುವುದರಿಂದ ವಿಜ್ಞಾಪಿಸುವೆನು, ನನ್ನ ಪತಿದೇವನು ನಿನಗಾಗಿ ತನುವನ್ನಡ್ಡಗೆಡಹಿರುವನು, ನಿನಗೆ ನೀನಾಗಿ ಉದ್ಧರಿಸು, ಇನ್ನು ಹೆಚ್ಚು ಹೇಳಲಾರೆನು, ಕ್ಷಮಿಸು' ಎಂದಳು.

ಸ್ವಾಮಿಯು ಮುಗುಳುನಗೆಯಿಂದ "ಕೇಳು, ಈ ತ್ರಿರಾತ್ರಿವ್ರತದಿಂದಲೂ, ನನ್ನ ನಾಮಸಂಕೀರ್ತನೆಯಿಂದಲೂ, ನಿನ್ನ ಪತಿಯ ಪಾಪಸಮೂಹವು ಭಸ್ಮವಾದುದು, ಆತನೀಗ ಪುನೀತನಾದನು. ಆತನ ದೇಹೇಂದ್ರಿಯಾದಿಗಳೆಲ್ಲಾ ಪರಿಶುದ್ಧವಾದುವು. ಶುದ್ಧಾಂತಃಕರಣನಾದನು. ಆದರೂ ಇನ್ನೂ ಆತನಿಗೆ ಸಂಪೂರ್ಣವಾಗಿ ಧನದಾಸೆಯು ಬಿಡಲಿಲ್ಲವಾದುದರಿಂದ ಸರ್ವಸ್ವವನ್ನೂ ತ್ಯಾಗಮಾಡಿ ನನ್ನ ದಾಸನಾಗಲು, ಆತನಿಗೆ ದರ್ಶನವನ್ನು ಕೊಡುವೆನು. ನಿನಗೆ ಶುಭವಾಗಲಿ" ಎಂದು ಆಜ್ಞೆಯನ್ನಿತ್ತು ಅದೃಶ್ಯನಾದನು.

## ಗುರುಬಲವೇ ಹರಿಬಲ.

ಸರಸ್ವತೀಬಾಯಿಯವರು ಹರಿಯಾಜ್ಞೆಯನ್ನು ತಮ್ಮ ಪತಿಯ ಸನ್ನಿಧಿಯಲ್ಲಿ ವಿಜ್ಞಾಪಿಸಿದರು. ನಾಯಕರು ಕೇಳಿದೊಡನೆ ಪರಮಾನಂದ ಪರವಶರಾಗಿ, ಪಾಂಡುರಂಗನ ನಾಮಸ್ಮರಣೆ ಮಾಡುತ್ತ ನರ್ತನ ಮಾಡಿದರು.

ಇಂದಿಗೆ ಧನ್ಯನಾದನೆಂದು ಪರಮಾತ್ಮನಲ್ಲಿ ಧನ್ಯವಾದವನ್ನರ್ಪಿಸುತ್ತಾ ಹೊನ್ನು ಮಣ್ಣುಗಳನ್ನು ಸಮವಾಗಿ ತಿಳಿದು, ನಾರವಸ್ತ್ರವನ್ನುಟ್ಟು, ಸಕಲೈಶ್ವರ್ಯದಿಂದ ತುಂಬಿದ ಮನೆಯನ್ನು ಬಿಟ್ಟು ಹೊರಗೆ ಬಂದು, ಮನೆಯ ಮೇಲೆ ತುಳಸೀ ದಳವನ್ನಿಟ್ಟು ಕೃಷ್ಣಾರ್ಪಣವೆಂದು ಬಡಬಗ್ಗರಿಗೆ ಸರ್ವಸ್ವವನ್ನೂ ದಾನ ಮಾಡಿ, ಪತ್ನೀಪುತ್ರರ ಸಮೇತವಾಗಿ ಮಾರುತಿಯ ದೇವಾಲಯಕ್ಕೆ ಬಂದರು.

ಇಂದು ನಾಯಕರ ಸ್ಥಿತಿಯೇ ಬೇರೆ, ವಜ್ರ ವೈಡೂರ್ಯಾದಿ ನವರತ್ನ ಖಚಿತವಾದ ಮಣಿಮಾಲೆಗಳನ್ನು ಹಾಕಿಕೊಳ್ಳುವ ಕೊರಳಲ್ಲಿ ತುಲಸಿ, ಧಾತ್ರಿ, ಕಮಲದ ಮಣಿಗಳ ಮಾಲೆಗಳು, ರತ್ನಮಯವಾದುಂಗುರವನ್ನಿಡುವ ಬೆರಳಿಗೆ ಪವಿತ್ರದುಂಗುರ, ಮೌಕ್ತಿಕ ನಿರ್ಮಿತ ಕರ್ಣಾಭರಣಕ್ಕೆ ಬದಲಾಗಿ ತುಲಸೀದಲ, ಸುವರ್ಣ ನಾಣ್ಯಗಳೇ ಮೊದಲುಗೊಂಡು ನವರತ್ನಗಳಿಂದ ತುಂಬಿದ ಚೀಲದಿಂದ ಭಾರವಾಗುತ್ತಿದ್ದ ಹೆಗಲಿನಲ್ಲಿ ಧಾನ್ಯದಿಂದ ತುಂಬಿ ತೂಗಾಡುವ ಜೋಳಿಗೆ, ಪೀತಾಂಬರಗಳನ್ನುಡುವ ದೇಹಕ್ಕೆ ನಾರವಸ್ತ್ರ, ಹೆಚ್ಚೇನು, ಹಗಲು ರಾತ್ರಿಗಳಂತೆ ಸಂಪೂರ್ಣ ಬದಲಾಯಿಸಿತು.

ಆದರೆ, ಮೇಲೆ ಹೇಳಿದ ವಸ್ತ್ರಾಭರಣಗಳಿಂದ ನಾಯಕರು ಅಲಂಕರಿಸಿಕೊಳ್ಳುತ್ತಿದ್ದರೋ, ಅಥವಾ ಅಮೌಲ್ಯವಾದ ವಸ್ತ್ರಾಭರಣಗಳನ್ನು ಉಪಯೋಗಿಸಿದ ಮಾತ್ರದಿಂದಲೇ ಮಾಸಿಹೋದೀತೆಂಬುವ ಭಯದಿಂದ ಬಿಡುತ್ತಿದ್ದರೋ ತಿಳಿಯದು. ಉಪಯೋಗಿಸಲಿ, ಬಿಡಲಿ, ಅದು ಹೇಗೂ ಇರಲಿ, ಉಪಯೋಗಿಸುವಷ್ಟು ಐಶ್ವರ್ಯಾನುಕೂಲವುಳ್ಳವರಾಗಿದ್ದರೆಂಬುದೇನೋ ನಿಶ್ಚಯ. ಹೀಗಿದ್ದವರು ಇಂದು ವೈರಾಗ್ಯಭಾಗ್ಯವೇ ಭಾಗ್ಯವೆಂದು ತಿಳಿದುಕೊಂಡರು. ಲಕ್ಷಾಂತರ ರೂಪಾಯಿಯ ವ್ಯಾಪಾರದ ವೃತ್ತಿಯನ್ನು ಬಿಟ್ಟು ಭಿಕ್ಷಾವೃತ್ತಿಯನ್ನು ಕೈಗೊಂಡರು.

ಹರಿನಾಮದಿಂದ ಪವಿತ್ರಿತವಾದ ಪತಿಯು ತಂದ ಭಿಕ್ಷೆಯ ಪದಾರ್ಥಗಳಿಂದ ಸರಸ್ವತೀಬಾಯಿಯವರು ಪಾಕವನ್ನು ಮಾಡಿ ಸಿದ್ಧಗೊಳಿಸಿದರು. ನಾಯಕರು ಮಾಡಿದ ಪದಾರ್ಥಗಳನ್ನು ಮಾರುತಾಂತರ್ಗತ ಶ್ರೀಹರಿಗೆ ನಿವೇದನಮಾಡಿ ಪತ್ನೀಪುತ್ರರೊಂದಿಗೆ ಭೋಜನ ಮಾಡಿ ಸಂತೋಷದಿಂದ ಭಗವದ್ವಿಚಾರವನ್ನು ಕುರಿತು ಮಾತನಾಡುತ್ತ ಕುಳಿತರು. ನಾಯಕರು "ನಾಳೆಗೇನು ಗತಿ? ಎನ್ನುವಷ್ಟು ಕೂಡಾ ಯೋಚನೆಯಿಲ್ಲದಂತೆ ಸುಖವಾಗಿರುವಂತಾ

ಯಿತು. ಇದೇ ಸೌಖ್ಯ"ವೆಂದು ಹೇಳಲು, ಸಾಧ್ವಿಯು 'ತಾವು ಶ್ರೀಮಂತರಾಗಿರುತ್ತಿದ್ದುದಕ್ಕಿಂತಲೂ ನಶ್ವರವಾದ ಭಾಗ್ಯದ ಬಂಧದಿಂದ ಮುಕ್ತರನ್ನಾಗಿ ಮಾಡಿ ಶಾಶ್ವತ ವೈರಾಗ್ಯಭಾಗ್ಯವನ್ನನುಗ್ರಹಿಸಿದ ಭಗವಂತನ ದಯೆಯಿಂದ ಈಗಳಿನ ಇರುವಿಕೆಯೇ ಉತ್ತಮೋತ್ತಮ'ವೆಂದರು. ಅಂತೂ ಸತಿಪತಿಗಳೀರ್ವರೂ ಶ್ರೀಹರಿಯನ್ನು ಕೊಂಡಾಡುತ್ತ ಕುಳಿತರು.

ನಾಯಕರಿಗೆ ಆ ರಾತ್ರಿ ಪಂಪಾಕ್ಷೇತ್ರದ ಚಕ್ರತೀರ್ಥದ ಸಮೀಪದಲ್ಲಿ ಓರ್ವ ತಪಸ್ವಿಗಳಿರುವುದಾಗಿಯೂ ಅವರಿಂದ ಉಪದೇಶ ಹೊಂದುವುದಾಗಿಯೂ ಸ್ವಪ್ನವಾಯಿತು. ‡

ನಾಯಕರು ಮಾರಣೆಯ ದಿವಸವೇ ಸ್ವಪ್ನವಾದುದು ಸತ್ಯವೆಂದೂ, ಶ್ರೀಹರಿಯೇ ಆಜ್ಞಾಪಿಸಿದನೆಂದೂ ನಂಬಿದರು. ವಾಚಕರಿಗೆ ನೆನಪಿನಲ್ಲಿರಬಹುದು—'ನಾಯಕರು ಹಿಂದೆ ಪಾಂಡುರಂಗನ ಮಹಿಮೆನ್ನು ಪ್ರತ್ಯಕ್ಷ್ಯ ಕಂಡುಬಂದೆವೆಂದು ಹೇಳಿದಾಗಲೂ ನಂಬದೆ ಹಾಸ್ಯವಮಾಡಿ ನಕ್ಕುಬಿಟ್ಟರೆಂಬುದೂ ನಾಯಕರಿಗೆ ಭಗವದ್ವಿಚಾರವೆಂದರೇ ಹಾಸ್ಯಾಸ್ಪದವಾಗಿತ್ತೆಂಬುದೂ' ಆದರೆ ಈಗ ಹಾಗೆ ಮಾಡದೆ ಪತ್ನೀಪುತ್ರರ ಸಮೇತವಾಗಿ ಪಾದಚಾರಿಗಳಾಗಿ ಪ್ರಯಾಣ ಮಾಡಿದರು. ಸ್ವಾಮಿಯಾಜ್ಞೆಯಾದ ಗುರುಗಳ ಸಂದರ್ಶನವು ಯಾವಾಗ ಲಭಿಸುವುದೋ ಎಂದು ಕಾತರಿಸುತ್ತಿದ್ದರು. ಗುರುಗಳ ಸಂದರ್ಶನವಾಗುವುದೆಂಬುವ ಉತ್ಸಾಹ ಸಂತೋಷಗಳಿಂದ ಬಹು ದೂರವಾಗಿದ್ದ ಪಂಪಾಕ್ಷೇತ್ರವನ್ನು ಜಾಗ್ರತೆಯಾಗಿ ಬಂದು ತಲ್ಪಿದರು. ನಾಯಕರ ಬರುವಿ

---

‡ ಸ್ವರೂಪತಃ ಕರ್ಮಜ ದೇವತೆಗಳಾದ ವ್ಯಾಸರಾಯರಿಗಿಂತಲೂ ನಾರದರಾದ ಪುರಂದರದಾಸರು ತಾರತಮ್ಯ ರೀತಿಯಿಂದ ಎಷ್ಟೋಷ್ಟೋ ದೊಡ್ಡವರು. ಹೀಗಿರುವಾಗಲೂ ಭಗವಂತನು ಈ ಗುರುಶಿಷ್ಯ ಸಂಬಂಧವನ್ನೇತಕ್ಕೆ ಕಲ್ಪಿಸಿದನೆಂದರೆ—ಪ್ರಪಂಚದ ನಡವಳಿಕೆಯನ್ನು ತಿದ್ದುವುದಕ್ಕಾಗಿ ತಾನೂ ಕೂಡಾ ಮನುಷ್ಯತ್ವೇನ ರಾಮಕೃಷ್ಣಾದಿ ಅವತಾರಗಳಲ್ಲಿ ವಿಶ್ವಾಮಿತ್ರ ಸಾಂದೀಪನಾಚಾರ್ಯರುಗಳಲ್ಲಿ ಗುರುಭಾವನೆಯನ್ನಿಟ್ಟು, ವಿದ್ಯಾವ್ಯಾಸಂಗಮಾಡಿದಂತೆ ನಟಿಸಿರುತ್ತಾನೆ. ಹಾಗೆಯೇ ಲೋಕದಲ್ಲಿ ಗುರುಗಳನುಗ್ರಹವಾಗದೆ, ಹರಿಯನುಗ್ರಹವು ಆಗಲಾರದೆಂದೂ, ಗುರುಗಳಾಗತಕ್ಕವರು ಅವಿರೋಧ ಭಗವಜ್ಞಾನವನ್ನುಂಟುಮಾಡಿ ಕೊಡುವವರಾಗಿರಬೇಕೆಂಬುದೂ, ತುರೀಯಾಶ್ರಮವಾದ ಸನ್ಯಾಸವು ಶ್ರೇಷ್ಠವೆಂದೂ, ತಿಳುಹಿಸುವದಕ್ಕಾಗಿ ಈ ರೀತಿ ಇಚ್ಛೆಯನ್ನು ಮಾಡಿದನು.

ಕೆಯನ್ನು ಕುರಿತು, ತಪಸ್ವಿಗಳಾದ ಇವರಿಗೂ ಶ್ರೀಹರಿಯು ಮೊದಲೇ ಸೂಚಿಸಿದ್ದನು. ನಾಯಕರು ಸ್ವಾಮಿಗಳ ದರ್ಶನವನ್ನು ಮಾಡಿ, ಸಾಷ್ಟಾಂಗ ಪ್ರಣಾಮಪೂರ್ವಕ ಶ್ರೀಹರಿಯ ಆಜ್ಞೆಯನ್ನು ಗುರುಗಳಲ್ಲಿ ವಿಜ್ಞಾಪಿಸಿದರು. ನಾಯಕರ ಬರುವಿಕೆಯನ್ನೇ ಕಾದಿದ್ದ ಶ್ರೀಗಳವರು ಪರಮ ಹರ್ಷಿತರಾಗಿ, ಶಾಸ್ತ್ರನಿಯಮವನ್ನನುಸರಿಸಿ ಮಂತ್ರೋಪದೇಶ ಕೊಟ್ಟು, 'ಇಂದಿನಿಂದ ನೀವು ಮಾಡುವ ಕೃತ್ಯಗಳನ್ನೆಲ್ಲಾ ಪುರಂದರವಿಠಲನಿಗೆ ಸಮರ್ಪಿಸಬೇಕೆಂದು' ಆಜ್ಞಾಪಿಸಿದರು. ನಾಯಕರು ಇಂದು **ಹರಿದಾಸರಾದರು.**

ಈ ಗುರುಗಳು ಯಾರು? ಇವರ ಚರಿತ್ರೆಯೆಂತಹುದೆಂದು ತಿಳಿದುಕೊಳ್ಳಲು ವಾಚಕರು ತುಂಬಾ ಕುತೂಹಲದಿಂದಿರಬಹುದಲ್ಲವೆ? ವಾಚಕರೇ! ಇವರ ಸಂಪೂರ್ಣ ಚರಿತ್ರೆಯನ್ನು ಇಲ್ಲಿ ವಿವರಿಸಲು ಅದೇ ಒಂದು ಗ್ರಂಥವಾಗುತ್ತದೆಂಬ ವಿಷಯ ಬಾಹುಳ್ಯ ಭಯದಿಂದ ಬಿಡಬೇಕಾಗಿದೆ. ಅಸ್ತು, ಸಂಕ್ಷೇಪವಾಗಿಯಾದರೂ ತಿಳಿದುಕೊಳ್ಳೋಣ. ಇವರು ಬ್ರಹ್ಮಣ್ಯತೀರ್ಥರೆಂಬುವ ಯತಿವರರ ಅನುಗ್ರಹದಿಂದಲೇ ಜನ್ಮಿಸಿದವರು, ಜನಿಸುವಾಗ ಭೂಸ್ಪರ್ಶವೇ ಕೂಡದೆಂದು ಬ್ರಹ್ಮಣ್ಯತೀರ್ಥರು ಬಂಗಾರದ ಹರಿವಾಣದಲ್ಲಿಯೇ ಮಗುವನ್ನು ಪ್ರಸವಿಸುವಂತೆ ಏರ್ಪಡಿಸಿದರು. ಅಜ್ಞಾನ ಸಂಬಂಧವಾದ ಭೂಸ್ಪರ್ಶವೇ ಇಲ್ಲ. ನಂತರ ಮಾತಾಪಿತೃಗಳಿಂದ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು, ಶ್ರೀಕೃಷ್ಣಾರ್ಪಿತವಾದ ಕ್ಷೀರಪಾನದಿಂದಲೇ ಮಗುವನ್ನು ಬೆಳಸಿ, ಕಾಲಕಾಲಕ್ಕೆ ನಡೆಯ ಬೇಕಾದ ಮಂಗಲಕಾರ್ಯಗಳನ್ನು ನೆರವೇರಿಸಿದರು. ಇವರಿಗೆ ಶ್ರೀಪಾದರಾಜರೆಂಬುವ ಯತಿವರರಿಂದ ವಿದ್ಯಾಭ್ಯಾಸಮಾಡಿಸಿದರು. ನಂತರ ಸನ್ಯಾಸಾಶ್ರಮವನ್ನು ಕೊಟ್ಟರು. ತುರ್ಯಾಶ್ರಮ ಸ್ವೀಕಾರಮಾಡಿ, ಅನೇಕ ಕಾಲ ಭೈಷ್ಮೀ ಸತ್ಯಾ ಸಮೇತ ಶ್ರೀಕೃಷ್ಣನ ಸೇವೆ ಮಾಡುತ್ತ, ಲೋಕೋಪಕಾರಕ್ಕಾಗಿ ಗಹನವಾದ ಅನೇಕ ಸಿದ್ಧಾಂತ ಗ್ರಂಥಗಳಿಗೆ ಟೀಕಾಟಿಪ್ಪಣಿಗಳನ್ನೂ; ನ್ಯಾಯಾಮೃತ, ತರ್ಕತಾಂಡವ, ಚಂದ್ರಿಕಾದಿ ಸ್ವತಂತ್ರ ಗ್ರಂಥಗಳನ್ನೂ ರಚಿಸಿದರು. ಅಲ್ಲದೆ ಕನ್ನಡದಲ್ಲಿಯೂ, ಅನೇಕ ಪದ್ಯಗಳನ್ನೂ ರಚಿಸಿರುವರು. ಅನೇಕ ಕಾಲ ದೇಶೋದ್ಧಾರ ಕಾರ್ಯಮಾಡಿ, ನಂತರ ವಿಜಯನಗರದ ಸಮೀಪದಲ್ಲಿ ತುಂಗಭದ್ರಾ ನದಿಯ ದ್ವೀಪದಲ್ಲಿ ಭಕ್ತಾಭೀಷ್ಟ

ಪ್ರದರಾಗಿ ಬೃಂದಾವನಸ್ಥರಾಗಿ ಈಗಲೂ ರಾರಾಜಿಸುತ್ತಿರುವರು. ಇವರೇ ಶ್ರೀವ್ಯಾಸರಾಯರು. ಚಂದ್ರಿಕಾಚಾರ್ಯರೆಂದೂ ಪ್ರಸಿದ್ಧಿಯುಂಟು.

## ಸಮರ್ಪಣ.

ದಾಸರವರು ಗುರುಗಳಾಜ್ಞೆಯಂತೆ ತಾವು ಮಾಡುವ ಕೃತ್ಯಗಳನ್ನೆಲ್ಲಾ ಪುರಂದರವಿಟ್ಠಲನಿಗರ್ಪಿಸುತ್ತಾ ಪುರಂದರವಿಟ್ಠಲನ ಅಂಕಿತದಿಂದಲೇ ಪದ್ಯಗಳನ್ನು ಹಾಡಿ ವಿಟ್ಠಲನಿಗೆ ಸಮರ್ಪಿಸುತ್ತಾ ಬಂದರು. * ದಾಸರವರು ಮಂತ್ರ ಪುನಶ್ಚರಣೆಯಿಂದ ಸಿದ್ಧರಾದರು. ಭಗವದ್ದರ್ಶನವಾದಾಗ, ಈ ಉಗಾಭೋಗವನ್ನು ಹಾಡಿದರು.

## ಉಗಾಭೋಗ.

ಇಂದಿನ ದಿನವೇ ಶುಭದಿನವು | ಇಂದಿನ ವಾರ ಶುಭವಾರ |
ಇಂದಿನ ತಾರೇ ಶುಭತಾರೇ | ಇಂದಿನ ಯೋಗ ಶುಭಯೋಗ |
ಇಂದಿನ ಕರಣ ಶುಭಕರಣ | ಇಂದು ಪುರಂದರವಿಟ್ಠಲ ರಾಯನ |
ಸಂದರುಶನಫಲವೆನಗಾಯ್ತು | ಸಂದರುಶನಫಲವೆನಗಾಯ್ತು ||

ದಾಸರವರು ಕೇವಲ ವೈರಾಗ್ಯಶಾಲಿಗಳೆಂದು ಎಲ್ಲೆಲ್ಲಿಯೂ ಇವರ ಪ್ರಸಿದ್ಧಿಯು ಹಬ್ಬುತ್ತಾ ಬಂದಿತು. ಆ ಕಾಲದಲ್ಲಿ ವಿಜಯನಗರವನ್ನಾಳುತ್ತಿದ್ದ ಅಚ್ಯುತರಾಯ ಕೃಷ್ಣರಾಯರೆಂಬ ಧೊರೆಗಳ ಕಿವಿಗೂ ಈ ಮಾತು ಮುಟ್ಟಿತು. ಆವರು ತಮ್ಮ ವರ್ತಕ ಮಂಡಲಿಯಲ್ಲಿ ಅಗ್ರಗಣ್ಯರಾಗಿ ಅಗರ್ಭ ಶ್ರೀಮಂತರಾಗಿ ಬಡ್ಡಿಗೆ ಬಡ್ಡಿ ಚಿಕ್ಕಾಸು ಬಿಡದೆ ಗಂಟುಹಾಕುತ್ತಿದ್ದ ಪರಮ ಲೋಭಿಗಳಾದ ಶ್ರೀನಿವಾಸ ನಾಯಕರು ಸರ್ವಸ್ವ ದಾನಮಾಡಿ, ವಿರಾಗಿಗಳಾಗಿರುವರೆಂದರೆ ಆಶ್ಚರ್ಯಪಟ್ಟು, ಹಾಗಾದರೆ ದಾಸರನ್ನು ತಾವು ಒಂದು ಸಾರಿ ನೋಡಬೇಕೆಂದಿದ್ದರು.

---

* ದಾಸರವರು ಪುರಂದರವಿಟ್ಠಲನೆಂಬ ಅಂಕಿತದಿಂದಲೇ ಯಾವತ್ತು ಕೃತ್ಯಗಳನ್ನೂ ಭಗವಂತನಿಗೆ ಸಮರ್ಪಿಸುತ್ತಾ ಬಂದುದರಿಂದ, ಕಾಲಕ್ರಮದಲ್ಲಿ ಇವರಿಗೂ ಪುರಂದರದಾಸರೆಂದೇ ಪ್ರಸಿದ್ಧಿಯಾಯಿತೆಂತಲೂ, ಮತ್ತು ಕೆಲವರ ಅಭಿಪ್ರಾಯ—ಇವರು ಪುರಂದರಘಡದವರಾದುದರಿಂದ, ಪುರಂದರದ ದಾಸರು ಎಂಬುದಕ್ಕೆ ಬದಲಾಗಿ ಪುರಂದರದಾಸರು ಎಂಬುವ ಪ್ರತೀತಿಯುಂಟಾಯಿತೆಂತಲೂ ಉಂಟು.

ಇವರಿಬ್ಬರೂ ಒಂದು ದಿನ ಮಠಕ್ಕೆ ಶ್ರೀಗಳವರ ದರ್ಶನಾರ್ಥವಾಗಿ ಬಂದಿದ್ದಾಗ್ಯೆ ಶ್ರೀಗಳವರ ಸಮೀಪದಲ್ಲಿಯೇ ಕುಳಿತಿದ್ದ ದಾಸರನ್ನು ಕಂಡರು. ಆದರೆ ಅವರಿಗೆ ದಾಸರೇ ಶ್ರೀನಿವಾಸನಾಯಕರಾಗಿದ್ದವರೆಂದು ಕೂಡಲೇ ಗುರ್ತುಹಿಡಿಯಲು ಆಗಲಿಲ್ಲ. ಏತಕ್ಕೆಂದರೆ--ಆಗಿನ ವೇಷಭಾಷೆಗಳೇ ಬೇರೆ, ಈಗಿನ ಅಲಂಕಾರವೇ ಬೇರೆ. ನಾಯಕರಾಗಿದ್ದಾಗ ನಡೆಯುತ್ತಿದ್ದ ನಡೆವಳಿಕೆಗೆ ತಕ್ಕ ಮುಖಲಕ್ಷಣ, ಈಗಿನ ಆಚರಣೆಗೆ ತಕ್ಕ ಮುಖಕಾಂತಿ, ಹೀಗೆ ಸಂಪೂರ್ಣವಾಗಿ ಬದಲಾಯಿಸಿದ್ದರಿಂದ ಗುರ್ತಿಸಲಾಗದಿದ್ದರೂ ಹಾಗೆಯೇ ಸ್ವಲ್ಪಹೊತ್ತು ದೃಷ್ಟಿಸಿ ನೋಡಿ ತಾವು ಹಿಂದೆ ಅನೇಕ ಸೇಳೆಯಲ್ಲಿ ನೋಡಿದ ಮುಖದಂತೆ ತೋರುತ್ತಿದೆಂದು ಅಂದುಕೊಂಡು, ಮತ್ತು ಮತ್ತು ಚೆನ್ನಾಗಿ ಗುರ್ತಿಸಿ, ಓಹೋ! ಅವರೇ ಇವರು. ಯಾರು? ಶ್ರೀನಿವಾಸನಾಯಕರಾಗಿದ್ದವರೇ ಇಂದು ಹರಿದಾಸರು, ಎಂದು ತಮ್ಮಲ್ಲಿಯೇ ಸಂದೇಹವನ್ನು ಪರಿಹರಿಸಿಕೊಂಡರು. ಇವರ ವಿಷಯವನ್ನು ತಿಳಿದುಕೊಳ್ಳಬೇಕೆಂಬುವ ಕುತೂಹಲದಿಂದ ದಾಸರವರನ್ನು ಮಾತನಾಡಿಸಿ, ಹಾಗೆಯೇ ಮಾತನಾಡಿಕೊಳ್ಳುತ್ತಾ ತಮ್ಮ ಮನೆಗೆ ಕರೆತಂದರು. ಅರಮನೆಯಲ್ಲಿ ಏಕಾಂತವಾಗಿ ರಾಯರೂ ದಾಸರೂ ಇಬ್ಬರೇ ಕುಳಿತುಕೊಂಡು ದಾಸರವರ ಯಾವತ್ತು ಅನುಭವಗಳನ್ನೂ ಕೇಳಿ ಪರಮಾಶ್ಚರ್ಯದಿಂದ ರಾಯರು ತಾವೂ ಕೂಡಾ ಭಕ್ತಿಪರವಶರಾಗಿ ಪರಮಾತ್ಮನ ಅದ್ಭುತವಾದ ಲೀಲೆಗಳನ್ನು ಸ್ಮರಿಸುತ್ತಾ, ದಾಸರವರ ದರ್ಶನದಿಂದ ತಾವೂ ಧನ್ಯರಾದೆವೆಂದು ಯಥೇಷ್ಟವಾದ ವಸ್ತ್ರಾಭರಣಗಳಿಂದ ಮರ್ಯಾದೆಯನ್ನು ಮಾಡಿ ದಾಸರವರನ್ನು ಕಳುಹಿಸಿಕೊಟ್ಟರು. ದಾಸರವರು ಮಾರ್ಗದಲ್ಲಿ ಕಂಡ ಬಡಬಗ್ಗರಿಗೆ ರಾಯರಿಂದ ತಮಗೆ ಬಂದ ಯಾವತ್ತು ಉಡುಗರೆಗಳನ್ನೂ ಕೊಟ್ಟುಬಿಟ್ಟರು. ಈ ಸಮಾಚಾರವು ರಾಯರ ಕಿವಿಗೆ ಬಿದ್ದೊಡನೆ ರಾಯರು ಓಹೋ! ತಾವು ಮಾಡಿದ ಮರ್ಯಾದೆಯು ದಾಸರ ಮನಸ್ಸಿಗೆ ತೃಪ್ತಿಯಾಗದ್ದರಿಂದ ಹೀಗೆ ಮಾಡಿದರೆಂದುಕೊಂಡು ಸುಮ್ಮಗಾದರು.

ರಾಯರು ಮತ್ತೊಂದು ವೇಳೆ ಮಠಕ್ಕೆ ಬಂದಾಗ್ಯೆ ದಾಸರವರು ತಾವು ಮಾಡಿದ ಮರ್ಯಾದೆಗೆ ಅತೃಪ್ತಿಹೊಂದಿದರೆಂಬುವ ಭಾವಾರ್ಥದಿಂದ ವ್ಯಂಗ್ಯ

ವಾಗಿ ಮಾತನಾಡಿದರು. ದಾಸರು ಅವರ ಮಾತಿನ ಅರ್ಥವನ್ನು ತಿಳಿದು, "ರಾಯರೇ! ತಾವು ಕೊಟ್ಟ ವಸ್ತುಗಳೆಲ್ಲಾ ಶ್ರೀಹರಿಗೆ ಮುಟ್ಟಿದೆ. ಅವುಗಳನ್ನು ನಾನೇ ಉಪಯೋಗಿಸುವುದಕ್ಕಿಂತಲೂ ಬಡಬಗ್ಗರಿಗೆ ಕೊಟ್ಟುದರಿಂದ ನೀವು ಮಾಡಿದ ದಾನವು ವಿಶೇಷ ಸಾರ್ಥಕವಾಯಿತು. ಪುರಂದರವಿಟ್ಠಲನ ವಿಶೇಷಾನುಗ್ರಹಕ್ಕೆ ಕಾರಣರಾಗುವಿರಿ" ಎಂದರು. ರಾಯರು ತಮ್ಮಲ್ಲಿ ತಾವೇ, ನವಕೋಟಿನಾರಾಯಣನೆಂಬ ಬಿರುದಾಂಕಿತರಾಗಿರುತ್ತಿದ್ದವರಿಗೆ ಯಾವ ಭಾಗ್ಯಕ್ಕೆ ತಾನೇ ಕಡಿಮೆಯಿದ್ದಿತು? ಅವೆಲ್ಲ ಕ್ಷಣಿಕವೆಂದು ಕಂಡುಬಂದುದರಿಂದಲ್ಲವೆ? ಸರ್ವಸ್ವ ದಾನಮಾಡಿ ವೈರಾಗ್ಯಭಾಗ್ಯವೇ ಭಾಗ್ಯವೆಂದು ಈ ಸನ್ಮಾರ್ಗಾವಲಂಬಿಗಳಾದುದು. ಇದರಿಂದಲೇ ತಿಳಿದುಕೊಳ್ಳಬಹುದಾಗಿದ್ದಿತು, ಬುದ್ಧಿ ಮೋಸಹೋಗಿ ತಾವು ಊಹಿಸಿದ ತಪ್ಪು ಊಹೆಯನ್ನು ಇವರಲ್ಲಿ ಪ್ರಸ್ತಾಪಿಸಿದುದೇ ತಮ್ಮ ಅಚಾತುರ್ಯವೆಂದಂದುಕೊಂಡು, "ದಾಸರೇ! ನಮ್ಮ ತಪ್ಪುತಿಳುವಳಿಕೆಯಿಂದಾಡಿದ ಮಾತನ್ನು ಕ್ಷಮಿಸಿ" ಎಂದು ಕ್ಷಮೆ ಬೇಡಿದರು. ಈಗ ದಾಸರವರ ವಿಷಯದಲ್ಲಿ ನಿಜವಾದ ವಿರಾಗಿಗಳೆಂದು ಇನ್ನೂ ವಿಶೇಷವಾದ ಭಕ್ತಿಯುಂಟಾಯಿತು.

ಒಂದು ಕಾಲದಲ್ಲಿ ಕೃಷ್ಣರಾಯರಿಗೆ ಕುಹಯೋಗವು ಪ್ರಾಪ್ತವಾಗಲು ಶ್ರೀಗಳವರು ತಮ್ಮ ತಪಃಪ್ರಭಾವದಿಂದ ಈ ದುರ್ಯೋಗದಿಂದ ಪಾರುಮಾಡಿ ಕಾಪಾಡಿದರು. ಆ ಕಾಲದಲ್ಲಿ ರಾಯರು ಗುರುಗಳನುಗ್ರಹದಿಂದ ತಮಗೆ ಬಂದ ಅಪಮೃತ್ಯುವಿನಿಂದ ಪಾರಾದುದಕ್ಕಾಗಿ ಯಥೇಚ್ಛವಾದ ದಾನಧರ್ಮಗಳನ್ನು ಮಾಡಿದರು. ದಾಸರವರನ್ನೂ ಕೂಡ, "ದಾಸರೇ! ತಮಗೆ ಅಪೇಕ್ಷೆ ಯಾವುದಿದೆಯೋ ಅದನ್ನು ಅಪ್ಪಣೆಕೊಡಿಸಿದಲ್ಲಿ ನಡೆಸಿಕೊಡುವೆನು" ಎಂದು ಕೇಳಿದಾಗ ದಾಸರವರು ಚಕ್ರತೀರ್ಥದ ಸಮೀಪದಲ್ಲಿ ಒಂದು ಮಂಟಪವನ್ನು ಕಟ್ಟಿಸಬೇಕೆಂದು ಹೇಳಿದರು. ಅವರ ಅಪೇಕ್ಷೆಯಂತೆ ಯಾತ್ರಾರ್ಥಿಗಳು ಕುಳಿತುಕೊಳ್ಳಲು ಅನುಕೂಲಿಸುವಂತೆ ಒಂದು ಮಂಟಪವನ್ನು ಕಟ್ಟಿಸಿದರು. ಬಹು ಶಿಥಿಲವಾದರೂ ಈಗಲೂ ಸಾವಿರಾರು ಜನಗಳು ಕುಳಿತುಕೊಳ್ಳುವಷ್ಟು ವಿಸ್ತಾರವಾಗಿ **ದಾಸರ ಮಂಟಪ**ವೆಂಬುವ ಹೆಸರಿನಿಂದ ಈಗಲೂ ಇವರ ನೆನಪು ತಂದು ಕೊಡುತ್ತದೆ.

ಇದೇ ಸಮಯದಲ್ಲಿ ಶ್ರೀಗೋಪಾಲಕೃಷ್ಣ ದೇವರ ಪ್ರೀತ್ಯರ್ಥವಾಗಿ ಮಠಕ್ಕೂ ಅನೇಕ ಗ್ರಾಮಗಳನ್ನು ಜಹಗೀರಾಗಿ ಬಿಟ್ಟುಕೊಟ್ಟು ಶ್ರೀದೇವರಿಗೆ ಅಮೌಲ್ಯವಾದ ಆಭರಣಗಳನ್ನೂ ಸಮರ್ಪಿಸಿದರು. ಕಾರಣಾಂತರಗಳಿಂದ ಎಷ್ಟೋ ಕೈಕಳಚಿಹೋಗಿದ್ದರೂ ಜ್ಞಾಪಕಾರ್ಥವಾಗಿ ಒಂದೆರಡಾಭರಣಗಳೂ, ಗ್ರಾಮಗಳೂ ಉಳಿದಿವೆ.

ಶ್ರೀಗಳವರು ಉತ್ತರ ಯಾತ್ರೆಗಾಗಿ ಹೊರಟರು. ದಾಸರವರೂ ಅವರ ಜೊತೆಯಲ್ಲಿಯೇ ಯಾತ್ರೆಗಳನ್ನು ಮುಗಿಸಿಕೊಂಡು ಗುರುಗಳಿಂದ ಅಪ್ಪಣೆಯನ್ನು ಪಡೆದು ಪಂಢರಾಪುರಕ್ಕೆ ಬಂದರು.

## ದಾಸರವರ ದೇಶಾಟನೆ.

### (ತಿರುಪತಿಯಾತ್ರೆ)

ದಾಸರವರು ರಾಮಸೇತು ವರೆಗೂ ದಕ್ಷಿಣ ದೇಶದಲ್ಲಿರುವ ತೀರ್ಥಕ್ಷೇತ್ರಗಳನ್ನೆಲ್ಲಾ ದರ್ಶನ ಮಾಡಿಕೊಂಡು ಬರಬೇಕೆಂದು ಹೊರಟರು. ತಿರುಪತಿಯಲ್ಲಿ ಶ್ರೀನಿವಾಸನ ಸೇವೆಯಲ್ಲ ಕೆಲವು ಕಾಲವಿರುತ್ತಿದ್ದರು.

ಒಂದು ದಿವಸ ತಮ್ಮ ಹೃನ್ಮಂದಿರದಲ್ಲಿ ಶ್ರೀನಿವಾಸನನ್ನು ಸ್ಥಾಪಿಸಿ, ಮಾನಸಪೂಜೆಯನ್ನು ಮಾಡುತ್ತಿದ್ದರು. ಅದೇ ಸಮಯದಲ್ಲಿ ದೇವಸ್ಥಾನದಲ್ಲಿ ಅರ್ಚಕರು ಶ್ರೀನಿವಾಸನ ಮೂರ್ತಿಗೆ ಸ್ನಾನಪೇ ಮುಂತಾದ ಪೂಜೆಯನ್ನು ಮುಗಿಸಿ, ನಾಮಹತ್ತಿಸಲು ತಿರುಚೂರ್ಣವನ್ನು ಹಣೆಗೆ ಹತ್ತಿಸಿದರು. ಚೂರ್ಣವು ಹಣೆಗೆ ಹಿಡಿಯದೆ ಉದುರಿಹೋಯಿತು. ಪುನಃ ಮತ್ತೊಮ್ಮೆ ಹತ್ತಿಸಿದರು. ಆಗಲೂ ನಾಮವು ಹಿಡಿಯಲಿಲ್ಲ. ಮೂರು ಮೂರು ಬಾರಿ ಪ್ರಯತ್ನಪಟ್ಟಾಗ್ಯೂ ದೇವರ ಹಣೆಯಮೇಲೆ ನಾಮವು ನಿಲ್ಲದಿರುವುದನ್ನು ನೋಡಿ, ಆ ಕಾಲದಲ್ಲಿ ದೇವಸ್ಥಾನದ ಯಜಮಾನನಾದ ಮಹಾಂತನಿಗೆ ಈ ಸಂಗತಿಯನ್ನು ತಿಳುಹಿಸಿದರು. ಆತನು ಇದೇನೋ ಅರ್ಚಕರ ಕೈಚಲಾಕು, ಪಚ್ಚಕರ್ಪೂರದ ಆಶೆ. ಪಾಪ! ಎಂದು ಯೋಚಿಸಿ ಪುನಃ ಪಚ್ಚಕರ್ಪೂರವನ್ನು ಕೊಟ್ಟು, ತನ್ನೆದುರಿನಲ್ಲಿಯೇ ಅರ್ಚಿಸಬೇಕೆಂದು ಹೇಳಿದನು. ಆತನೆದುರಾಗಿಯೇ ಮೂರುಬಾರಿ ಪ್ರಯತ್ನಪಟ್ಟಾಗ್ಯೂ, ಶ್ರೀದೇವರ ಹಣೆಯ

ಮೇಲೆ ನಾಮವು ನಿಲ್ಲದಿರುವುದನ್ನು ನೋಡಿ ಎಲ್ಲರೂ ಆಶ್ಚರ್ಯ ಭಯಗಳಿಂದ ತಮ್ಮಿಂದ ಏನಾದರೂ ಅಪಚಾರವು ನಡೆದಿದ್ದಾಗ್ಯೂ ಅಜ್ಞಾತವಾದುದರಿಂದ ಕ್ಷಮಿಸಬೇಕಾಗಿ ಶ್ರೀದೇವರನ್ನು ಬೇಡಿಕೊಂಡರು.

ಇಷ್ಟರಲ್ಲಿ ದಾಸರು ಮಾನಸ ಪೂಜೆಯನ್ನು ಮುಗಿಸಿ, ಸ್ವಯಂವ್ಯಕ್ತ ಮೂರ್ತಿಯ ದರ್ಶನಕ್ಕಾಗಿ ದೇವಸ್ಥಾನಕ್ಕೆ ಬಂದರು. ಇವರು ಬರುವಾಗ ಎಲ್ಲೆಲ್ಲಿಯೂ ನಾಮದ ವಿಚಾರವಾಗಿಯೇ ನಾನಾ ವಿಧವಾಗಿ ಮಾತುಗಳಾಡುತ್ತಿದ್ದುದನ್ನು ಕೇಳಿ ಭಗವಂತನು ತನ್ನಲ್ಲಿ ವಾತ್ಸಲ್ಯದಿಂದ ತನ್ನ ಬರುವಿಕೆಗಾಗಿ ತನಗೆ ಮಹಾ ಮಂಗಳಾರತಿಯ ದರ್ಶನವನ್ನು ಮಾಡಿಸುವ ಅಂತಃಕರಣದಿಂದ ಹೀಗೆ ಮಾಡಿದನೆಂದು ತಿಳಿದು, 'ಭಗವಂತಾ! ನೀನೆಂತಹ ದಯಾಪರ'ನೆಂದು ಶ್ರೀನಿವಾಸನಿಗೆ ಅನಂತಾನಂತ ಪ್ರಣಾಮಗಳನ್ನು ಸಮರ್ಪಿಸಿ, ಮಹಾಂತನನ್ನು ಕುರಿತು, "ಬಾವಾಜಿಗಳೇ! ಇದೋ ಈ ಪಚ್ಚ ಕರ್ಪೂರದಿಂದ ದೇವರಿಗೆ ನಾಮವನ್ನು ಹತ್ತಿಸುವಂತೆ ಅರ್ಚಕರಿಗೆ ತಿಳಿಸಿ" ಎಂದು ತಮ್ಮ ಕೈದೇವತಾರ್ಚನೆಯ ಪೆಟ್ಟಿಗೆಯಲ್ಲಿರುವ ಪಚ್ಚಕರ್ಪೂರವನ್ನು ಕೊಟ್ಟರು. ಅರ್ಚಕರು ಆಗ ನಾಮವನ್ನು ಹತ್ತಿಸಲು ತತ್ಕ್ಷಣವೇ ನಾಮ ಹಿಡಿಯಿತು. ನಂತರ ಮಹಾ ಮಂಗಳಾರತಿಯಾಯಿತು. ಎಲ್ಲರೂ ದೇವರಿಗೆ ದಾಸರಲ್ಲಿರುವ ಅಭಿಮಾನವನ್ನು ಕಂಡು ಕೊಂಡಾಡಿದರು.

ಹೀಗೆ ಕೆಲವು ಕಾಲ ತಿರುಪತಿಯಲ್ಲಿದ್ದು ನಂತರ ಘಟಿಕಾಚಲ, ಕಾಲಹಸ್ತಿ, ಕಂಚಿ, ಶ್ರೀಮುಷ್ಣ, ತೋತಾದ್ರಿ, ಮಾಯಾವರ, ಶ್ರೀರಂಗ, ಮಧುರೆ, ದರ್ಭಶಯನ, ರಾಮೇಶ್ವರ ಮುಂತಾದ ಕ್ಷೇತ್ರಗಳಿಗೆ ಹೋಗಿ ಹಿಂದಿರುಗಿ ಬರುವಾಗ ಅನಂತಶಯನ, ಕನ್ಯಾಕುಮಾರಿಯವರೆಗೂ ಯಾವತ್ತು ಕ್ಷೇತ್ರಗಳಿಗೂ ಹೋಗಿ ಅಲ್ಲಲ್ಲಿರುತ್ತಿದ್ದ ತೀರ್ಥಗಳನ್ನೂ, ಕ್ಷೇತ್ರಮೂರ್ತಿಗಳನ್ನೂ ದರ್ಶನಮಾಡಿ ತೀರ್ಥಕ್ಷೇತ್ರಗಳ ಮಹಿಮೆಗಳನ್ನು ಪದ್ಯರೂಪವಾಗಿ ಹಾಡಿ, ಅಲ್ಲಲ್ಲಿರುತ್ತಿದ್ದ ಅನೇಕ ಪಾಮರರುಗಳಿಗೂ ತತ್ತ್ವೋಪದೇಶ ಮಾಡುತ್ತಾ, ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಬಹುಕಾಲ ವಾಸಿಸುತ್ತಿದ್ದ ಕಣ್ವತೀರ್ಥದ ಮಾರ್ಗವಾಗಿ ಸುಬ್ರಹ್ಮಣ್ಯ, ಧರ್ಮಸ್ಥಳಗಳಿಗೆ ಹೋಗಿ ಅಲ್ಲಿಂದ ಪರಮ ಪಾವನವೆನಿಸಿದ ಉಡುಪಿಕ್ಷೇತ್ರಕ್ಕೆ ಬಂದರು.

## ಉಡುಪೀಯಾತ್ರೆ.

ಉಡುಪಿಯಲ್ಲಿ ಶ್ರೀಮದಾಚಾರ್ಯರ ಕರಾರ್ಚಿತ ಶ್ರೀಕೃಷ್ಣನ ಸೇವೆಯನ್ನು ಮಾಡುತ್ತಾ ಅನಂತೇಶ್ವರ ದೇವರ ಸನ್ನಿಧಿಯಲ್ಲಿ ಕೆಲವು ಕಾಲ ವಿದ್ದರು.

ಈ ಮಧ್ಯೆ ಚಾತುರ್ಮಾಸ್ಯದ ಏಕಾದಶೀ ದಿವಸ ಪದ್ಧತಿಯಂತೆ ಶ್ರೀಕೃಷ್ಣದೇವರ ಗುಡಿಯಲ್ಲಿ ದೇವರ ಇದಿರಿನಲ್ಲಿರುವ ಚಂದ್ರಶಾಲೆಯಲ್ಲಿ ಜಾಗರ ಸೇವೆಯು ನಡೆಯುತ್ತಿತ್ತು. ದಾಸರವರ ಸಮಕಾಲದಲ್ಲಿ ಉಡುಪಿಯಲ್ಲಿದ್ದ ಸೋದಾಪುರ ಮಠಾಧೀಶರಾದ ಶ್ರೀವಾದಿರಾಜತೀರ್ಥ ಶ್ರೀಪಾದಂಗಳವರು ಜಾಗರಸೇವೆಯಲ್ಲಿ ದಾಸರನ್ನು ಕಾಣದಿರಲು ದಾಸರೆಲ್ಲಿ! ಬರಲಿಲ್ಲವೊ? ಎಂದು ಪ್ರಶ್ನೆಮಾಡಿದರು. ನೆರದಿದ್ದವರಲ್ಲಿ ದಾಸರವರಿಗೆ ಇಲ್ಲಿಗೆ ಬರಲು ಅವಕಾಶವಾಗಲಿಲ್ಲವೋ ಏನೋ ಎಂದೊಬ್ಬ, ಅವರಿಗೆ ಈ ಕೂಟದಲ್ಲಿ ಸರಿಬೀಳುವುದಿಲ್ಲವಾದ್ದರಿಂದ ಏಕಾಂತವಾಗಿ ಭಜನೆಮಾಡುತ್ತಿರಬಹುದೆಂದೊಬ್ಬ, ಈ ದಿವಸವೇ ಬ್ರಹ್ಮಸಾಕ್ಷತ್ಕಾರ ಮಾಡಿಕೊಳುತ್ತಾರೆಂದೊಬ್ಬ, ಹೀಗೆ ನಾನಾ ಪ್ರಕಾರವಾಗಿ ಹಾಸ್ಯಕ್ಕಾರಂಭವಾಯಿತು.

ದಾಸರೂ ವ್ಯಾಸರಾಯರ ಮಠದಲ್ಲಿರುವಾಗಲೇ ಶ್ರೀಗಳವರೂ ಅವರಲ್ಲಿಯೇ ವಿದ್ಯಾವ್ಯಾಸಂಗ ಮಾಡುತ್ತಿದ್ದರು. ಬಹುಕಾಲ ಜೊತೆಯಲ್ಲಿಯೇ ಇದ್ದವರಾದುದರಿಂದ ದಾಸರವರ ಯೋಗ್ಯತೆಯನ್ನು ಚನ್ನಾಗಿ ಬಲ್ಲವರಾಗಿದ್ದರು. ಮಾತ್ರವಲ್ಲ, ಋಜುಪದಾರ್ಹರಾದ ಜ್ಞಾನಿಗಳಿಗೆ ದಾಸರವರ ಸ್ವರೂಪಜ್ಞಾನವೇ ತಿಳಿದಿದ್ದಿತೆಂದರೂ ವಿಶೇಷೋಕ್ತಿಯಾಗಲಾರದು.

ಮಠದವರ ಕುಹಕ ಕುಚೋದ್ಯಗಳಿಗೊಂದಕ್ಕೂ ಕಿವಿಗೊಡಲಿಲ್ಲ. ದಾಸರೆಲ್ಲಿರುವರೋ ತಿಳಿದೇಬರಬೇಕೆಂದು ಮಠದವರಿಗೆ ಆಜ್ಞೆಯನ್ನಿತ್ತರು. ಶ್ರೀಗಳವರ ಆಜ್ಞೆಯಾದ ನಂತರ ಯತ್ನವಿಲ್ಲದೆ ಬಂದು ತಿಳಿಯಬೇಕಾಯಿತು. ಆ ಸಮಯದಲ್ಲಿ ದಾಸರು ಅನಂತೇಶ್ವರ ದೇವರ ಇದಿರಿನಲ್ಲಿರುವ ಧ್ವಜಸ್ತಂಭದ ಸಮೀಪದಲ್ಲಿ ಭಜನೆ ಮಾಡುತ್ತಾ ಮೈಮರೆದು ನರ್ತನಸೇವೆ ಮಾಡುತ್ತಿದ್ದರು. ಬಂದವರು, ದಾಸರೇ! ದಾಸರೇ!! ಎಂದು ಕೂಗಿದರು. ಇವರಿಗೆ ಪ್ರತ್ಯುತ್ತರ ಬರಲಿಲ್ಲ. ತಮ್ಮ ಸೇವೆಯಲ್ಲಿಯೇ ತಾವಿದ್ದರು. ಹಿಂದಿರುಗಿ

ಹೋಗಿ ಶ್ರೀಗಳವರಲ್ಲಿ "ಬುದ್ಧಿ! ದಾಸರವರಿಗೆ ಬುದ್ಧಿ ಸರಿಯಾಗಿರುವಹಾಗಿಲ್ಲ, ಇತ್ತ ಕಡೆ ದೃಷ್ಟಿಯಿಲ್ಲದೆ ಮನಸ್ವಿ ಕುಣಿಯುತ್ತಿದ್ದಾರೆ" ಎಂದು ಹೇಳಿದರು. ಮಠದವರ ಅವಿವೇಕವನ್ನು ಕಂಡ ಶ್ರೀಗಳವರು ಅಂತರಂಗದಲ್ಲಿ ನಗುತ್ತಾ, ಬಹಿರಂಗದಲ್ಲಿ 'ಕೆಲವು ಕಾಲ ಹಾಗೆಯೇ ಸರಿ' ಎಂದು ಸುಮ್ಮನಿದ್ದರು.

ಸಾಧನ ದ್ವಾದಶಿಯಾದುದರಿಂದ ಶ್ರೀಗಳವರು ಸಕಾಲದಲ್ಲಿ ಶ್ರೀಕೃಷ್ಣನಿಗೆ ನಡೆಯಬೇಕಾದ ಕಟ್ಟಳೆಯ ಪೂಜೆಗಳನ್ನೆಲ್ಲಾ ನಡೆಸಿ, ಮಹಾಪೂಜೆಯನ್ನೂ ನೆರವೇರಿಸಿ, ಸಿಂಹಾಸನಕ್ಕೆ † ದಯಮಾಡಿಸಿ ತೀರ್ಥಕೊಡಲು ಸಿದ್ಧರಾದರು. ಆಗಲೂ 'ದಾಸರು ಬರಲಿಲ್ಲವೊ?' ಎಂದು ಕೇಳಿದರು. ಆ ಕೂಡಲೆ ಒಬ್ಬ ಧೂರ್ತನು "ದಾಸರಿಗೆ ಇನ್ನೂ ದ್ವಾದಶಿ ಬಂದಿಲ್ಲ, ಹುಚ್ಚು ಹಿಡಿದವರನ್ನು ಕಟ್ಟಿಕೊಂಡರೆ ಉಪವಾಸ ಮಾಡಿರುವವರ ಗತಿಯೇನಾಗಬೇಕು" ಎಂದು ನಿಷ್ಠುರ ಮಾತನ್ನಾಡಿದನು. ಶ್ರೀಗಳವರು ಖಂಡಿತವಾಗಿಯೂ ದಾಸರನ್ನು ಕರೆದುಕೊಂಡೇ ಬರಬೇಕೆಂದು ಆಜ್ಞಾಪಿಸಿದರು. ಅಲ್ಲಲ್ಲಿ ಕಿವಿ ಕಿವಿಗಳಲ್ಲಿ ದಾಸರವರಿಗೆ ಕೊಟ್ಟ ಬಿರುದೇ ಶ್ರೀಗಳವರಿಗೂ ಕೊಡಲಾರಂಭವಾಯಿತು. ಓರ್ವನು ಬಂದು "ದಾಸರೇ! ದಯಮಾಡಿಸಿ, ಸದ್ಯಃ ನಿಮ್ಮ ಭಜನೆ ಸಾಕು, ಉಪವಾಸ ಮಾಡಿದವರೆಲ್ಲಾ ಕಣ್ ಕಣ್ ಬಿಡಿಯುತ್ತಿದ್ದಾರೆ, ಮೊದಲು ಜೀವದಾನ ಮಾಡಿ ಪಾರಣೆ ಮುಗಿದ ನಂತರ ಕತ್ತಲೆಯವರೆಗೂ ಬೇಕಾದಷ್ಟು ಅವಕಾಶವಿದೆ, ನಿಮ್ಮ ಗಂಟಲಾರುವ ವರೆಗೂ ಕೂಗಿಕೊಳ್ಳಿ, ಕಾಲು ಸೋಲುವಷ್ಟು ಕುಣಿಯಿರಿ, ತೀರ್ಥಕ್ಕಾಗಿ ಶ್ರೀಗಳವರು ಕಾದಿದ್ದಾರೆ, ಆಜ್ಞೆಯಾಗಿದೆ ಹೊರಡಿ" ಎಂದನು. ದಾಸರು ತತ್‌ಕ್ಷಣವೇ ಶ್ರೀಗಳವರ ಸನ್ನಿಧಿಗೆ ಬಂದರು.

ಶ್ರೀಗಳವರು ತಾವು ತೀರ್ಥವನ್ನು ತೆಗೆದುಕೊಂಡು ಉಳಿದ ಶ್ರೀಗಳವರಿಗೆಲ್ಲಾ ತೀರ್ಥವನ್ನು ಕೊಟ್ಟು ದಾಸರನ್ನು ಕರೆದರು. ದಾಸರು ನಮಸ್ಕರಿಸಿ, ತೀರ್ಥಕ್ಕೆ ಕೈಹಿಡಿದರು. ಇದನ್ನು ನೋಡುತ್ತಲೇ ತಾವು ವಿದ್ವಾಂಸರೆಂದು ತಿಳಿದುಕೊಂಡಿದ್ದ ಶಠರಿಗೆಲ್ಲಾ ಸಹಿಸಲಾರದಷ್ಟು ಕೋಪವುಂಟಾಗಿ

† ಪರ್ಯಾಯ ಶ್ರೀಗಳವರು ಕುಳಿತುಕೊಂಡು ತೀರ್ಥಕೊಡುವ ಸ್ಥಳಕ್ಕೆ ಸಿಂಹಾಸನವೆಂದು, ಭೋಜನಕ್ಕೆ ಕುಳಿತುಕೊಳ್ಳುವ ಸ್ಥಳಕ್ಕೆ ಚೌಕಿಯೆಂದು ಸಂಕೇತ.

ಮತ್ಸರದಿಂದ ಸಹಿಸಲಾರದೆ ತಮ್ಮ ತಮ್ಮೊಳಗೇ ಗೊಣಗುಟ್ಟುವುದಕ್ಕಾರಂಭಿಸಿದರು. ಸಂಸ್ಥಾನದಲ್ಲಿಯೂ ಈ ಅನ್ಯಾಯ ಉಂಟೆ? ವಿದ್ಯಾಪಕ್ಷಪಾತವೇ ಇಲ್ಲದೇ ಹೋಯಿತೆ? ಯೋಗ್ಯತಾ ವಿಚಾರವೇ ಇಲ್ಲದೇ ಹೋಯಿತೆ! ನಾಲ್ಕು ನಾಲ್ಕು ಶಾಸ್ತ್ರಗಳಲ್ಲಿ ಅದ್ವಿತೀಯರೆನಿಸಿಕೊಂಡಿದ್ದವರುಗಳು ಅನೇಕರಿರುತ್ತಾ ಹೆಂಗಸರಂತೆ ಕನ್ನಡ ಪದಗಳನ್ನು ಹೇಳುವ ದಾಸರಿಗೆ (ಬಹುಶಃ ಆ ಸಂದರ್ಭದಲ್ಲಿ ದಾಸರಿಗೆ ಎಂಬುವುದಕ್ಕೆ ಬದಲಾಗಿ ಏಕ ವಚನದಿಂದಲೇ ಸಂಬೋಧಿಸಿರಬಹುದು, ಆದರೂ ಈಗ ನಮಗೆ ಬೇಡ) ಮೊದಲು ತೀರ್ಥವೆ? ಅಥವಾ ಕರ್ಮನಿಷ್ಠರೆಂದಾದರೂ ಹೇಳಬೇಕೆ? ಮಿಗಿಲಾದ ಕರ್ಮವಂತೂ ಇರಲಿ, ಪ್ರಾರಬ್ಧ ಕರ್ಮ, ಬೆಳಗಿನ ವರೆಗೂ ಥೈ ಥೈ ಎಂದು ಕುಣಿಯುತ್ತಿದ್ದು ಮೈ ಬೆವರು ಹೋಗುವುದಕ್ಕಾದರೂ ಸ್ನಾನ ಮಾಡದೆ ಹಾಗೆಯೇ ಬಂದು ಕುಕ್ಕರಿಸಿಕೊಂಡವರಿಗೆ ಮೊದಲು ತೀರ್ಥಕೊಡುವುದೆಂದರೆ, ಇನ್ನು ಸಂಸ್ಥಾನದ ಗೌರವವೇನು ಉಳಿಯಿತು? ಎಂದು ಹಾಗೆಯೇ ತಮ್ಮ ತಮ್ಮ ಮನೆಗಳಿಗೇ ಹೋಗುವುದೆಂದಂದುಕೊಂಡರು. ಆದರೆ ಕೃಷ್ಣನ ಪ್ರಸಾದೋಲ್ಲಂಘನದ ಭಯಕ್ಕಿಂತಲೂ, ಶ್ರೀಗಳವರನ್ನು ನಿರ್ಲಕ್ಷಿಸಿ ಹೋಗುವಷ್ಟು ಧೈರ್ಯಸಾಲದೆ ಬಂದ ತಪ್ಪಿಗೆ ಹೇಗಾದರೂ ಈ ಹೊತ್ತು ಭೋಜನ ಮಾಡಿಕೊಂಡು ಹೋಗುವುದು, ಇನ್ನು ಮುಂದೆ ಮಠಕ್ಕೆ ಬರುವುದನ್ನೇ ನಿಲ್ಲಿಸಿಬಿಡುವುದೆಂದು ನಿರ್ಧರಿಸಿದರು.

ಶ್ರೀಗಳವರು ಎಲ್ಲರಿಗೂ ತೀರ್ಥಕೊಟ್ಟು ಚೌಕಿಯಲ್ಲಿ ಬ್ರಾಹ್ಮಣರ ಸಮೂಹದೊಂದಿಗೆ ಭೋಜನಕ್ಕೆ ಕುಳಿತರು. ದಾಸರವರ ಮಹಿಮೆಯನ್ನು ಎಲ್ಲರಿಗೂ ತಿಳಿಸುವುದಕ್ಕಾಗಿ ಉದ್ದೇಶಪೂರ್ವಕವಾಗಿಯೇ ಶ್ರೀಗಳವರು ದಾಸರಿಗೆ ಗಂಗಾಸ್ನಾನವಾಗಿದೆಯೇ ಎಂದರು. ಆಗಲೆ ಸುಮ್ಮನಿರದೆ ಒಬ್ಬ ಕುಹೋದ್ಯಗಾರನು, "ದಾಸರವರು ಮನಸ್ಸು ಮಾಡಿದರೆ ಗಂಗೆಯೇ ಇಲ್ಲಿಗೆ ಬರುವಳು" ಎಂದನು. ದಾಸರು ಬ್ರಾಹ್ಮಣನ ಮಾತನ್ನು ದೇವರು ಎಂದಿಗೂ ನಿರರ್ಥಕ ಮಾಡುವುದಿಲ್ಲ, ಎಂದು ಆಗಲೇ ಗಂಗಾಸ್ತೋತ್ರವನ್ನು ಮಾಡಲಾರಂಭಿಸಿದರು. ಗಂಗಾಜನಕನಾದ ಶ್ರೀರಂಗನೇ ಇವರ ಭಕ್ತಿಪಾಶದಲ್ಲಿ ಕಟ್ಟಿಬಿದ್ದಿರುವಾಗ ಗಂಗೆಯೂ ಅನುಗ್ರಹಿಸಲೇ ಬೇಕಲ್ಲವೆ? ಆಗಲೇ ಮೇಲ್ಛುಗಡೆ

ಯಿಂದ ಜಲಧಾರೆಯು ಸುರಿಯಲಾರಂಭವಾಯಿತು. ತಾವು ವಿದ್ವಾಂಸರೆಂಬುವ ಅಹಂಕಾರಿಗಳಿಗೆಲ್ಲಾ ಕುಳಿತಿದ್ದ ಹಾಗೆಯೇ ಭೋಜನಪಾತ್ರೆಯು ತೇಲಾಡಲಾರಂಭವಾಯಿತು. ಎಲ್ಲರೂ ವಿಸ್ಮಯಗೊಂಡರು. ಶ್ರೀಗಳವರು "ಈಗಲಾದರೂ ದಾಸರಲ್ಲಿ ಕ್ಷಮೆಯನ್ನು ಬೇಡಿರಿ, ಇಲ್ಲವಾದರೆ ನೀರು ಹೀಗೆಯೇ ಉಕ್ಕೇರಿ ಬರುತ್ತಲೇ ಇದ್ದರೆ ಪರಿಣಾಮವೇನಾಗಬಹುದೆಂದು ಯೋಚಿಸಿರಿ" ಎನ್ನಲು, ದಾಸರು "ಯಾರೂ ಕ್ಷಮೆಯನ್ನು ಬೇಡಬೇಕಾದುದಿಲ್ಲ, ನಾನೇ ಬ್ರಾಹ್ಮಣರಿಗೆಲ್ಲಾ ನಮಸ್ಕರಿಸುವೆನು" ಎಂದು "ಗಂಗೆಯು ಬ್ರಾಹ್ಮಣರ ಬಾಯಲ್ಲಿ ಬಂದ ಮಾತನ್ನು ಸಾರ್ಥಕಗೊಳಿಸಿ ಬ್ರಾಹ್ಮಣ ಭೋಜನದ ವೈಭವವನ್ನು ನೋಡಿ ತನ್ನ ತಂದೆಯಾದ ಶ್ರೀಕೃಷ್ಣನ ಪಾದಸಂದರ್ಶನ ಮಾಡಿಕೊಂಡು ಹೋಗುವುದಕ್ಕಾಗಿ ಬಂದಿದ್ದಳಲ್ಲದೆ ಅನಾಹುತಕ್ಕಲ್ಲ. ಈಗಲೇ ಹೊರಟು ಹೋಗುವಳು" ಎಂದು "ಗಂಗೆ" ಎಂದು ಒಂದು ಬಾರಿ ಹಾಡಿದರು. ಆಗಲೇ ಜಲಧಾರೆಯು ನಿಂತಿತು.

ದಾಸರವರಿಂದ ನಡೆದ ಅಮಾನುಷ ವ್ಯಾಪಾರವನ್ನು ಕಂಡು, ಎಲ್ಲರೂ ಏಕಕಂಠದಿಂದ ದಾಸರವರನ್ನು ಮಹಾತ್ಮರು! ಮಹಾತ್ಮರು!! ಎಂದು ಕೊಂಡಾಡಿದರು. ಇಂತಹರಿಗಲ್ಲವೆ? ಮಹಾತ್ಮರು ಎಂಬುವ ಕೀರ್ತಿಯು ಒಪ್ಪತಕ್ಕದ್ದು.

ಅನಂತರ ವಾದಿರಾಜತೀರ್ಥರು ಸೋದೆಗೆ ಪ್ರಯಾಣ ಮಾಡುವಾಗ ಸಂಗಡಲೇ ದಾಸರನ್ನು ಕರೆದುಕೊಂಡು ಹೊರಟರು. ದಾಸರು ಸೋದೆಯಲ್ಲಿರುತ್ತಿದ್ದಾಗ್ಯೆ ಯಾತ್ರಾರ್ಥಿಗಳಿಗೆ ಇಳಿದುಕೊಳ್ಳುವುದಕ್ಕಾಗಿ ಒಂದು ಛತ್ರವನ್ನು ಕಟ್ಟಿಸಿರುವರು. ಇವರು ಗೃಹಸ್ಥಾಶ್ರಮಿಗಳಾದರೂ ಕಾರಣಾಂತರದಿಂದ ಇವರು ಕಟ್ಟಿಸಿದ ಛತ್ರಕ್ಕೆ ದಾಸರಮಠವೆಂಬ ಪ್ರತೀತಿಯಿಂದ ಈಗಲೂ ಉಂಟು.

ದಾಸರವರು ಶ್ರೀಗಳವರಿಂದ ಆಜ್ಞೆಯನ್ನು ಪಡೆದು, ಮೈಸೂರು ಸೀಮೆಯಲ್ಲಿರುವ ಕ್ಷೇತ್ರಗಳ ದರ್ಶನಕ್ಕಾಗಿ ಪ್ರಯಾಣ ಮಾಡಿದರು. ತೀರ್ಥಾವಳಿಯಲ್ಲಿ ತುಂಗಭದ್ರಾ ದರ್ಶನವಾದಾಗ (ತುಂಗೇ ಮಂಗಳ ತರಂಗೇ ಹರಿಸರ್ವಾಂಗೆ ಜಯ ಜಯ ಜಯ ತುಂಗಭದ್ರೇ) ಎಂದು ಸ್ತೋತ್ರಮಾಡಿರು

ವರು. ‡ ನಂತರ ಕಳಸದ ಮಾರ್ಗವಾಗಿ ಬೇಲೂರಿಗೆ ಬಂದು ವೈಕುಂಠ ದಾಸರ ಜೊತೆಯಲ್ಲಿ ಶ್ರೀಚನ್ನಕೇಶವನ ಸೇವೆಯಲ್ಲಿ ಕೆಲವು ದಿವಸಗಳಿದ್ದು ನಂತರ ಮೇಲುಕೋಟೆ, ನಂಜನಗೂಡು, ಶ್ರೀರಂಗಪಟ್ಟಣ ಮುಂತಾದ ಸ್ಥಳಗಳಿಗೆ ಹೋಗಿ ಬನ್ನೂರಲ್ಲಿರುವ ತಮ್ಮ ಗುರುಗಳ ಸನ್ನಿಧಿಗೆ ಬಂದು ಗುರುಗಳ ಮತ್ತು ಗೋಪಾಲಕೃಷ್ಣ ದೇವರ ಸೇವೆಯಲ್ಲಿ ಕೆಲವುಕಾಲವಿದ್ದು ಗುರುಗಳಿಂದ ಅನುಜ್ಞೆಯನ್ನು ಪಡೆದು, ಪಂಢರಾಪುರಕ್ಕೆ ಪ್ರಯಾಣ ಮಾಡಿದರು.

## ವಿಟ್ಠಲನ ವಿಚಿತ್ರ.

ದಾಸರವರು ಪಂಢರಾಪುರದಲ್ಲಿರುತ್ತಿರುವಾಗ, ಅನೇಕ ವಿಚಿತ್ರ ಚರಿತ್ರೆಗಳು ನಡೆದಿವೆ, ಅವೆಲ್ಲವನ್ನೂ ಇಲ್ಲಿ ವಿವರಿಸಲು ವಿಷಯ ಬಾಹುಳ್ಯವಾದೀತೆಂಬುವ ಭಯದಿಂದ ಮಾದರಿಗಾಗಿ ಒಂದೆರಡನ್ನು ಮಾತ್ರ ವಿವರಿಸಿದೆ.

ಒಂದು ದಿವಸ ದಾಸರು ದೇಹ ಸೌಕರ್ಯಕ್ಕಾಗಿ ತಮ್ಮ ಹಿರಿಯ ಮಗನಾದ ವರದಪ್ಪನನ್ನು ಕರೆದು, "ಒಂದು ತಂಬಿಗೆ ನೀರು ತಂದುಕೊಡು" ಎಂದು ಹೇಳಿದರು. ವರದಪ್ಪನಿಗೆ ಬಹುಶಃ ಕೇಳಿರಲಿಕ್ಕಿಲ್ಲ, ವರದಪ್ಪನು ಬರಲಿಲ್ಲ. ಪುನಃ "ವರದಾ! ಏಕೆ ಇಷ್ಟು ಸಾವಕಾಶ ಮಾಡುವೆ? ನೀರು ತರಲೊಲ್ಲೆಯಾ!" ಎಂದು ಕೂಗಿದರು. ಆಗಲೂ ವರದಪ್ಪನು ಬರುವ ಸಂದರ್ಭ ತೋರದಿದ್ದುದರಿಂದ ಶ್ರೀಪಾಂಡುರಂಗನೇ ಸ್ವಯಂ ವರದಪ್ಪನ ರೂಪದಿಂದ ನೀರು ತಂದುಕೊಟ್ಟನು. ದಾಸರವರು ಮಹಾ ಶಾಂತರೆಂಬುದರಲ್ಲಿ ಸಂಶಯವಿಲ್ಲ. ಪರಂತು. ಭಗವಂತನ ಮಾಯೆಗೆ ಯಾರುತಾನೇ ಈಡು, ರಮಾಬ್ರಹ್ಮಾದಿಗಳಿಗೇ ಕಾಲಾನುಕಾಲದಲ್ಲಿ ಮೋಹವುಂಟಾಗುವಂತೆ ಮಾಡುವನು. ಹೀಗಿರುವಾಗ ದಾಸರವರು ಮೋಹವಶರಾದರೆಂಬುದೇನು ಆಶ್ಚರ್ಯವಲ್ಲ, ಆಕ್ಷಣದಲ್ಲಿ ಕೋಪದಿಂದ "ವರದಾ! ಎಷ್ಟು ಸಾವಕಾಶ" ಎಂದು ನೀರು ತಂದುಕೊಟ್ಟ ಮಾಯಾ ವರದನಿಗೆ ತಲೆಯ ಮೇಲೆ (ತಂಬಿಗೆಯಿಂದ ಕಸಿ

‡ ದಾಸರವರು ಪ್ರತಿಯೊಂದು ಪದ್ಯಗಳನ್ನೂ ರಚಿಸುವುದಕ್ಕೆ ಕಾರಣವುಂಟು. ಕೆಲವು ಪದ್ಯಗಳನ್ನು ನೋಡುವಾಗಲೇ ಸಾಮಾನ್ಯವಾಗಿ ಇಂತಹ ಸಂದರ್ಭವಿರಬಹುದೆಂದು ಗೊತ್ತಾಗುತ್ತದೆ.

ದರು.) ಟೊಣದರು. ಪಾಂಡುರಂಗನು ದಾಸರವರಿಗೆ ತನ್ನ ಮಹಿಮೆಯನ್ನೂ ದಾಸರವರ ಮಾಹಾತ್ಮ್ಯವನ್ನೂ ಪ್ರಪಂಚಕ್ಕೂ ತಿಳಿಸಬೇಕೆಂದೇ ಹೀಗೆ ಮಾಡಿದವನಾದುದರಿಂದ, ಒಂದು ದಿವಸ ಪುರಂದರದಾಸರಂತೆ ರೂಪವನ್ನು ಧರಿಸಿ, ತನ್ನ ಅಲಂಕಾರದ ಹಸ್ತಾಭರಣ ಒಂದನ್ನು ಆ ಊರಲ್ಲಿರುತ್ತಿದ್ದ ಒಬ್ಬ ವೇಶ್ಯೆಗೆ ಕೊಟ್ಟು ಬಂದನು.

ಮಾರಣೆಯ ದಿವಸ ಅರ್ಚಕರು ವಿಟ್ಠಲನ ಒಂದು ಕೈಯಲ್ಲಿ ಕಂಕಣವು ಇಲ್ಲದಿರುವುದನ್ನು ನೋಡಿ ಆಭರಣಗಳ ಮೇಲ್ವಿಚಾರಣಾಕರ್ತನಾದ ಚಿನಿವಾರನಿಗೆ ಈ ಸಂಗತಿಯನ್ನು ತಿಳುಹಿಸಿದರು. ಚಿನಿವಾರನು ಇದರ ಪತ್ತೆ ಹಚ್ಚುವ ಬಗ್ಗೆ ಪ್ರಯತ್ನಿಸುತ್ತಿರಲು, ವೇಶ್ಯೆಯಲ್ಲಿ ಈ ಆಭರಣವಿದೆಯೆಂಬುವ ಸುಳುವು ತಿಳಿದು ಬಂದು, ಸರ್ಕಾರದ ಶಿಬಂದಿಗಳ ಸಹಾಯದಿಂದ ವೇಶ್ಯೆಯನ್ನು ವಿಚಾರಿಸಲು ಆಕೆಯು ತನಗೆ ಪುರಂದರದಾಸರು ತಂದುಕೊಟ್ಟರೆಂದು ಹೇಳಿದಳು. ಈ ಮಾತನ್ನು ಕೇಳಿದೊಡನೆಯೇ ಎಲ್ಲರೂ, "ಛಿ! ಛಿ! ಎಂತಹ ವಿರಕ್ತರ ಮೇಲೆ ಇಲ್ಲದ ಅಪವಾದವನ್ನು ಹೊರಿಸುವೆ? ಪಾಪಿಷ್ಠಳೆ" ಎಂದರು. ಆಕೆಯು ಪುನಃ "ಇದು ಎಂದಿಗೂ ಸುಳ್ಳಲ್ಲ, ಏಕಾಂತವಾಗಿ ನಡೆದ ಕಾರ್ಯಕ್ಕೆ ಬೇರೆ ಸಾಕ್ಷಿಯನ್ನು ಕೊಡಲಾರೆ ಇದಕ್ಕೆ ದೇವರೇ ಸಾಕ್ಷಿ" ಎಂದಳು. ಆಗ ಇನ್ನು ಯತ್ನವಿಲ್ಲ, ದಾಸರವರನ್ನೇ ವಿಚಾರಿಸಬೇಕಾಗಿ ಬಂದಿತು. ಎಲ್ಲರೂ ದಾಸರಲ್ಲಿಗೇ ಬಂದು ಭೇಟಿಮಾಡಿ, ಅಲ್ಲಿಯೂ ಮತ್ತೊಮ್ಮೆ ವೇಶ್ಯೆಯನ್ನು ವಿಚಾರಿಸಿದರು. ಅವರೆದುರಿನಲ್ಲಿಯೂ, ಅದೇ ಮಾತನ್ನೇ ಹೇಳಿದಳು. ಆಗ ಅಧಿಕಾರಿಯು, "ದಾಸರೇ! ಈ ವಿಷಯದಲ್ಲಿ ತಮ್ಮ ಸಮಾಧಾನ"ವೇನೆಂದು ಕೇಳಿದನು. ದಾಸರು ಪರಮಾಶ್ಚರ್ಯಪಡುತ್ತಾ ಸುಮ್ಮನಿದ್ದರು. ಅಧಿಕಾರಿಯು "ಈ ವೇಶ್ಯೆಗೆ ಈ ಒಡವೆಯನ್ನು ನೀವು ಕೊಟ್ಟುದಲ್ಲವೆಂಬುದಕ್ಕೆ ತಕ್ಕ ಕಾರಣವನ್ನು ಕೊಟ್ಟು ಹೇಳುವ ಸಾಕ್ಷಿಯುಂಟೆ?" ಎಂದನು. ದಾಸರು "ಎಲ್ಲವೂ ಪಾಂಡುರಂಗನೇ ಬಲ್ಲನು" ಎಂದರು. ಆಗಲೂ ಧೂರ್ತರು ಕುಹಕರೂ ಇದ್ದೇ ಇದ್ದರು. ಒಬ್ಬ ಅಧಿಕಾರಿಯು "ಈ ಕಪಟ ವೈರಾಗ್ಯದ ಮಾತುಗಳಿರಲಿ, ನೀವೇನಾದರೂ ನಿಮ್ಮ ಮೇಲೆ ಬಂದಿರುವ ಅಪವಾದವನ್ನು ತಪ್ಪಿಸಿಕೊಳ್ಳುವ ಸರಿಯಾದ ಸಾಕ್ಷಿಗಳನ್ನು ಕೊಡುವಿರೋ? ಅಥವಾ ಸರಕಾರದ ನಿಯಮದಂತಿರುವ ಶಿಕ್ಷೆಗೆ ಗುರಿಯಾಗುವಿರೋ?" ಎಂದನು. ಆಗಲೂ ದಾಸರು

'ಪಾಂಡುರಂಗನ ಚಿತ್ತ' ಎಂದರು. ಅಧಿಕಾರಿಯು "ಪಾಂಡುರಂಗನ ಚಿತ್ತವನ್ನು ತಿಳಿಯುವ ಶಕ್ತಿ ನಮಗಿಲ್ಲ, ಸರಿಯಾದ ಕಾರಣ ಕೊಟ್ಟು ಹೇಳುವ ಸಾಕ್ಷಿಗಳಿಂದ ಮಾತ್ರ ನಿರ್ಧರಿಸತಕ್ಕವರು, ನೀವು ಸರಿಯಾದ ಕಾರಣ ಕೊಡಲಿಲ್ಲ. ಕಳವಿನ ಮಾಲು ನಿಮ್ಮಿಂದಲೇ ಸಿಕ್ಕಿತೆಂದು ತಿಳಿದುಬಂದಿದೆ. ಆದುದರಿಂದ ಶಿಕ್ಷೆಗೆ ಗುರಿಯಾಗಲೇ ಬೇಕು" ಎಂದನು. ದಾಸರು 'ಶಿಕ್ಷಿಸುವರಾರೋ ಅನುಭವಿಸುವವರಾರೋ ಪಾಂಡುರಂಗನೇ ಬಲ್ಲನು' ಎಂದರು. ಅಧಿಕಾರಿಯು 'ಧೂರ್ತತೆಯಿಂದ ಈಗ ಶಿಕ್ಷಿಸುವವರು ಅಧಿಕಾರಿಗಳು ಅನುಭವಿಸುವವರು ದಾಸರು, ಪಾಂಡುರಂಗನು ಬಲ್ಲನಷ್ಟೆ? ಹಾಗಾದರೆ ಅವನೇ ತಪ್ಪಿಸಲಿ' ಎಂದು ಆಗಲೇ ಚಾವಟಿಯಿಂದ ಹೊಡೆಯುವಂತೆ ನಿಯಮಿಸಿದನು.

ದಾಸರು ಇದೇನೆಂದು 'ತೋರದೆ, ಈ ಪ್ರಾರಬ್ಧವೂ ಉಂಟೆ? ಆಗಲಿ ಪ್ರಾರಬ್ಧವು ತಪ್ಪಿದುದೇ ಅಲ್ಲ, ಅನುಭವಿಸಲೇ ಬೇಕು' ಎಂದು ಕಣ್ಣು ಮುಚ್ಚಿಕೊಂಡು ಪಾಂಡುರಂಗಾ! ಎಂದು ಜ್ಞಾನದೃಷ್ಟಿಯಿಂದ ಯೋಚಿಸಲು ಆಗ ದಾಸರ ಮನಸ್ಸಿಗೆ ಓಹೋ! ಈ ಶಿಕ್ಷೆಗೆ ತಾವೇ ಕಾರಣರೆಂದು ಹೊಳೆಯಿತು. ವರದಪ್ಪನ ರೂಪದಿಂದ ನೀರು ತಂದು ಕೊಟ್ಟವನೂ ಪಾಂಡುರಂಗನೆಂದೂ ತಾವು ತಂಬಿಗೆಯಿಂದ ತಲೆಯ ಮೇಲೆ ಕಸಿದದ್ದು ಪಾಂಡುರಂಗನಿಗೆಂದೂ, ಈಗ ಅದಕ್ಕಾಗಿ ತಮಗೆ ಈ ಪ್ರಾಯಶ್ಚಿತ್ತವೆಂದೂ ತಿಳಿದು ಪಾಂಡುರಂಗಾ! ನೀನು ನನ್ನನ್ನು ಪರೀಕ್ಷಿಸಲೆತ್ನಿಸಿದರೆ ನಾನು ಗೆಲ್ಲಬಲ್ಲೆನೆ? ನಿನ್ನ ಚಿತ್ತವೇ ನನ್ನ ಭಾಗ್ಯ, ಇದೇ ಸಂತೋಷ ಎಂದರು.

ಸರಕಾರದ ಆಜ್ಞೆಗೆ ತಡೆಯುಂಟೆ? ಆಗಲೇ ರಾಜ ಭಟರು ದಾಸರವರಿಗೆ ಹೊಡೆಯಲೆತ್ನಿಸಿ, ಕಂಬಕ್ಕೆ ಕಟ್ಟಿಹಾಕಿದರು. ಆಗ ದಾಸರು ಪಾಂಡುರಂಗಾ! ಈಗಲಾದರೂ ಮುಯ್ಯಕ್ಕೆ ಮುಯ್ಯ ತೀರಿತೆ? ಎಂದು (ಈ ಸಂದರ್ಭದಲ್ಲಿಯೆ) (ಮುಯ್ಯಕ್ಕೇ ಮುಯ್ಯ ತೀರಿತು | ಜಗದಯ್ಯ ಸಹಯ್ಯ ವಿಜಯ್ಯ ಪಂಢರಿರಾಯ) ಎಂಬುವ ಪದ್ಯವನ್ನು ಹಾಡಿ, ವಿಟ್ಠಲನಿಗರ್ಪಿಸಿದರು. ಆಗ ದಾಸರಿಗೆ ಎಷ್ಟೆಷ್ಟು ಕಶಾಪ್ರಹರಗಳನ್ನು ಮಾಡಿದರಷ್ಟಷ್ಟು ಹೊಡೆವವರಿಗೂ, ಹೊಡೆಯಲಾಜ್ಞಾಪಿಸಿದವರಿಗೂ ನೋವು ಉಂಟಾಗಿ

ಮೈಮೇಲೆಲ್ಲಾ ಬಾಶಾಳು ಮಾಡಲಾರಂಭವಾಯಿತು. ಆಗ ಕೂಡಲೇ ಗಾಬರಿಯಿಂದ ಇದೇನೋ ಪ್ರಮಾದವೇ ಸರಿ, ಎಂದು ಮಹಾ ಭಗವದ್ಭಕ್ತರಲ್ಲಿ ತಾವು ಆಚರಿಸಿದ ಕೃತ್ಯಕ್ಕೆ ತಕ್ಕ ಫಲಕ್ಕೆ ತಾವೇ ಭಾಗಿಗಳಾದೆವೆಂದು ತಿಳಿದವರಾಗಿ ದಾಸರವರಿಗೆ ಶರಣಾಗತರಾಗಿ ಕ್ಷಮೆಬೇಡಿ "ದಾಸರೇ! ಇದೇನು ಈ ಸಂದರ್ಭವು ನಮಗೆ ಅರ್ಥವಾಗಲಿಲ್ಲ"ವೆಂದು ಪ್ರಾರ್ಥಿಸಿದರು. ದಾಸರವರು "ಒಳಗಿನ ಗುಟ್ಟು ಶಿವನೇ ಬಲ್ಲ ಎಂಬಂತೆ, ಇದು ನಿಮ್ಮ ತಪ್ಪೂ ಅಲ್ಲ, ನನ್ನ ತಪ್ಪೂ ಅಲ್ಲ, ಪಾಪ! ಆ ವೇಶ್ಯೆಯ ತಪ್ಪೂ ಅಲ್ಲ, ಇವೆಲ್ಲವೂ ಕಪಟನಾಟಕ ಸೂತ್ರಧಾರಿಯ ಆಟಗಳು" ಎಂದರು. ಆಗ ಎಲ್ಲರೂ ಭಗವಂತನಿಗೂ ಭಕ್ತರಿಗೂ ಪರಸ್ಪರವಿರುವ ಸಂಬಂಧವನ್ನು ಕಂಡು ಪರಮಾಶ್ಚರ್ಯದಿಂದ ಕೊಂಡಾಡಿದರು.

## ಮೂಢಭಕ್ತಿಯೋ, ಮಾರುತಿಯ ದಯವೋ.

ದಾಸರವರು ಅಸಾಧಾರಣ ಮಹಿಮೆಯುಳ್ಳವರೆಂಬುವುದರಲ್ಲಿ ನಿಸ್ಸಂಶಯವಷ್ಟೆ? ಇನ್ನು ದಾಸರವರ ದಯಾಪಾತ್ರರಾದವರೆಲ್ಲರೂ ಕೂಡಾ ಎಂತಹ ಮಹಿಮೆಯುಳ್ಳವರೆಂಬುವುದಕ್ಕಾಗಿ ದಾಸರವರು ಪಂಢರಾಪುರದಲ್ಲಿರುತ್ತಿದ್ದಾಗ್ಯೆ ನಡೆದ ಒಂದು ವಿಚಿತ್ರ ಚರಿತೆಯನ್ನು ವಾಚಕರ ಮುಂದಿರಿಸುತ್ತದೆ.

ದಾಸರವರು ಒಂದು ದಿವಸ ತಮ್ಮ ಚಿಕ್ಕ ಮಗನಾದ ಮಧ್ವಪತಿಯನ್ನು ಕುರಿತು, ಮಧ್ವಪತಿ! ಈ ದಿವಸ ಮಾರುತಿಗೆ ನೈವೇದ್ಯವನ್ನು ಕೊಟ್ಟು ಬಾ ಎಂದು ಅಪ್ಪಣೆಕೊಡಿಸಿದರು. ತಂದೆಯವರ ಅಪ್ಪಣೆಯಂತೆ ಮಧ್ವಪತಿಯು ಪೂಜೋಪಕರಣಗಳನ್ನೆಲ್ಲಾ ತೆಗೆದುಕೊಂಡು ಗುಡಿಗೆ ಬಂದು ಸ್ನಾನ, ಗಂಧಾಕ್ಷತೆಗಳೇ ಮೊದಲಾದ ಪೂಜೆಯನ್ನು ಮುಗಿಸಿ, ನೈವೇದ್ಯದ ಗಂಟನ್ನು ಬಿಚ್ಚಿ ಶುತ್ತುಮಾಡಿ ಮೂರುತಿಯ ಮುಖದ ಹತ್ತಿರ ಹಿಡಿದು "ಹನುಮಪ್ಪಾ! ಊಟ ಮಾಡು ಎಂದನು" ಶಿಲಾಪ್ರತಿಮೆಯು ಊಟಮಾಡುವುದುಂಟೆ? ಒಂದು ಕ್ಷಣ ಹಾಗೆಯೇ ಹಿಡಿದಿದ್ದನು. 'ಏಕೆ ಊಟಮಾಡುವುದಿಲ್ಲ? ಇನ್ನೂ ಹಸಿವಾಗಲಿಲ್ಲವೋ? ಎಷ್ಟು ಹಸಿವಿದ್ದರೆ ಅಷ್ಟೇ ತಿನ್ನು' ಎಂದನು. ತಂದೆಯ ಅಪ್ಪಣೆಯನ್ನು ನೆರವೇರಿಸಬೇಕೆಂದಿಷ್ಟು ಮಾತ್ರ ತಿಳಿದಿದ್ದ ಬಾಲಕನು ಶಿಲಾವಿಗ್ರಹವು ತಿನ್ನುವುದೇ ತಿನ್ನಲಾರದೇ ಎನ್ನುವುದನ್ನು ಕೂಡಾ ತಿಳಿಯಲಾಗದವ

ನಾಗಿ ಏನು? ಸ್ವಲ್ಪವೂ ತಿನ್ನುವುದಿಲ್ಲವೋ? ತಂದೆಯವರಿಂದ ನನ್ನನ್ನು ಬೈಸಬೇಕೆಂದು ಹಟಹಿಡಿದಿರುವೆಯೋ? ನೀನು ತಿನ್ನದ ವಿನಾ ಬಿಡುವುದಿಲ್ಲ, ನಾನು ಮನೆಗೆ ಬೇರೆ ಹೋಗುವುದಿಲ್ಲವೆಂದು ತಾನೂ ಹಟಹಿಡಿದನು. ಏನು ತಿನ್ನುಏಯೋ ಇಲ್ಲವೋ? ಮಾರುತಿಗೆ ನೈವೇದ್ಯವನ್ನು ಕೊಟ್ಟು ಬಾ ಎಂದು ತಂದೆಯವರು ಹೇಳಿರುವರು. ಅವರು ಸುಳ್ಳು ಹೇಳುವರೆ? ತಿನ್ನು, ತಿನ್ನು, ಇದೋ! ಇನ್ನೂ ನೀನು ಮೊಂಡತನವನ್ನು ಮಾಡಿದರೆ ನಿನ್ನ ಕಾಲು ಬುಡದಲ್ಲಿಯೇ ಬಿದ್ದು ಪ್ರಾಣಬಿಡುತ್ತೇನೆ. ಏನು? ತಿನ್ನುವಿಯೋ? ಇಲ್ಲವೋ! ತಿನ್ನು, ಒಂದು ತುತ್ತಾದರೂ ತಿನ್ನು, ಎಂದು ಹೇಳುವ ಈ ಬಾಲಕನ ನಿರ್ವ್ಯಾಜ್ಯ ಭಕ್ತಿಗೂ ಪಿತೃವಾಕ್ಯ ಪರಿಪಾಲನಾಸಕ್ತಿಗೂ ಶಿಲಾಂತರ್ಯಾಮಿಯು ವಶನಾಗಿ ಕಲ್ಲು ಪ್ರತಿಮೆಯು, ಬಾಯಿ ತೆರೆಯಿತು. ಆಗ ಬಾಲಕನು ಒಂದೊಂದೇ ತುತ್ತುಮಾಡಿ, ತಾನು ತಂದಿರತಕ್ಕ ಅನ್ನವನ್ನೆಲ್ಲಾ ತಿನ್ನಿಸಿದನು. ಬಾಲಕನು ಹನುಮಪ್ಪಾ! ಈಗ ಸಂತೋಷವಾಯಿತು. ನೋಡಿದೆಯಾ! ಹೊಟ್ಟೆ ತುಂಬಾ ಹಸಿವು ಇಟ್ಟುಕೊಂಡು ಹಟಹಿಡಿದು ನೀನೂ ಉಪವಾಸ ಮಾಡಿ ನನ್ನನ್ನೂ ಬೈಸಬೇಕೆಂದಿದ್ದೆಯಲ್ಲಾ! ನಾಳೆಯಿಂದ ಬೇಗ ಬರುತ್ತೇನೆ, ಈಗ ಹೋಗಿಬರಲೆ? ಎಂದು ಹೇಳಿ ಮನೆಗೆ ಬಂದನು.

ದಾಸರಾಯರು ಭೋಜನಕ್ಕೆ ಕುಳಿತಿರುವಾಗ ಮಧ್ವಪತಿ! ಮಾರುತಿಗೆ ನೈವೇದ್ಯ ಕೊಟ್ಟು ಪ್ರಸಾದ ತಂದೆಯಾ! ಎಂದು ಕೇಳಲು ಮಧ್ವಪತಿಯು ಹೂ ನೈವೇದ್ಯ ಕೊಟ್ಟು ಬಂದೆ, ಪ್ರಸಾದ ಮಾತ್ರ ಉಳಿಯಲಿಲ್ಲ. ಮಾರುತಿಯು ಸ್ವಲ್ಪ ಹೊತ್ತು ಹೊಟ್ಟೆ ತುಂಬಾ ಹಸಿವಿದ್ದರೂ ಹಟಮಾಡಿದನು. ನಾನೂ ಬಿಡಲಿಲ್ಲ. ಅವನಿಗಿಂತಲೂ ಹಟಹಿಡಿದೆ, ಕೊನೆಗೆ ನನ್ನ ಹಟವೇ ಗೆದ್ದಿತು, ಊಟ ಮಾಡಿಸಿಯೇ ಬಂದೆ. ಒಂದಗಳು ಬಿಡದಂತೆ ಎಲ್ಲವನ್ನೂ ಭೋಜನ ಮಾಡಿರುತ್ತಾನೆ ಎಂದನು. ಎಲ್ಲರೂ ಹಾಸ್ಯಮಾಡಿ ಗೊಳ್ಳೆಂದು ನಕ್ಕುಬಿಟ್ಟರು. ಮಧ್ವಪತಿಗೆ ಅಳುಬಂದಿತು. ದಾಸರ ಆಗಿನ ಆಶ್ಚರ್ಯ ಸಂತೋಷಗಳಿಗೆ ಪಾರವಿಲ್ಲ. ಮಧ್ವಪತಿ! ಮಾರುತಿಗೆ ಭೋಜನಮಾಡಿಸಿದೆಯಾ! ನಾಳೆ ನನ್ನೆದುರಿನಲ್ಲಿ ಭೋಜನಮಾಡಿಸುತ್ತೀಯಾ! ಎಂದರು. ಮಧ್ವಪತಿಯು ಆಗತ್ಯವಾಗಿ ದಯಮಾಡಿಸಬೇಕು. ನಾಳೆಯೆ ಭೋಜನಮಾಡಿಸುತ್ತೇನೆ ಎಂದನು.

ಮಾರಣೆಯ ದಿವಸ ತಂದೆ ಮಕ್ಕಳಿಬ್ಬರೂ ಹೊರಟು ಮಾರುತಿಯ ದೇವಾಲಯಕ್ಕೆ ಬಂದರು. ಬಾಲಕನು ಸ್ನಾನ ಗಂಧಾಕ್ಷತೆಗಳನ್ನರ್ಚಿಸಿ ಯಥಾ ಪ್ರಕಾರ ಅನ್ನದ ತುತ್ತುಮಾಡಿ ವಿಗ್ರಹದ ಮುಖದ ಹತ್ತಿರ ಹಿಡಿದನು. ಮೂರ್ತಿಯು ಬಾಯಿ ಬಿಡಲಿಲ್ಲ. ದಾಸರು ವಿಚಿತ್ರ ವಿದ್ಯಮಾನವನ್ನು ಕಂಡು ಓಹೋ! ಗೊತ್ತಾಯಿತು, ನಿನ್ನೆ ಹುಡುಗನನ್ನು ಮೋಸಗೊಳಿಸಿ ಯಾರೋ ಭೋಜನ ಮಾಡಿರಬಹುದು, ಅಜ್ಞಾನಿಯಾದ ಬಾಲಕನು ಮಾರುತಿಯು ಭೋಜನಮಾಡಿದನೆಂದು ತಿಳಿದಿರುವನು, ಎಂದುಕೊಂಡು ಮಗು ಮಧ್ವಪತೀ! ಶಿಲಾ ವಿಗ್ರಹವು ಭೋಜನಮಾಡುವುದುಂಟೇನೋ? ಎಂದರು. ಮಧ್ವಪತಿಯು ನಿನ್ನೆಯೂ ಹೀಗೆಯೇ ಮಾಡಿದನೆಂದು ಪುನಃ ಮಾರುತಿರಾಯಾ! ದಿನಾಗಲೂ ಊಟದ ವೇಳೆಗೇ ಹಟಮಾಡುತ್ತೀಯಲ್ಲಾ ತಿನ್ನು ಹನುಮಪ್ಪಾ! ತಿನ್ನು ಇದೋ! ಈ ದಿವಸ ಉಪ್ಪಿನಕಾಯಿ ಇದೆ. ನಾಲಿಗೆಗೆ ಹಚ್ಚಿಕೊಳ್ಳುತ್ತಾ ತಿನ್ನು ಎಂದನು. ಆಗಲೂ ಮೂರ್ತಿಯು ಬಾಯಿ ಬಿಡಲಿಲ್ಲ. ಏನು? ತಿನ್ನುವುದಿಲ್ಲವೋ? ನಮ್ಮ ತಂದೆಯ ಇದಿರಿನಲ್ಲಿ ನನ್ನನ್ನೇ ಸುಳ್ಳುಗಾರನನ್ನಾಗಿ ಮಾಡಬೇಕೆಂದಿರುವೆಯೋ? ಇದೋ! ನಿನ್ನ ಪಾದಪೀಠಕ್ಕೆ ತಲೆಘಟ್ಟಿಸಿ ಪ್ರಾಣಕಳೆದುಕೊಳ್ಳುತ್ತೇನೆ, ಎಂದು ಸಿದ್ಧನಾಗಲು ಶಿಲಾಮೂರ್ತಿಯು ಬಾಯಿಕಳೆದು ಮಧ್ವಪತಿಯು ಕೊಡುವ ನೈವೇದ್ಯವನ್ನೆಲ್ಲಾ ಭೋಜನಮಾಡಿದನು.

ಇದನ್ನು ನೋಡಿದ ದಾಸರು ಆನಂದಬಾಷ್ಪ ಪೂರಿತ ನಯನದಿಂದ ಆಹಾ! ಭಗವದನುಗ್ರಹಕ್ಕೆ ನಿಷ್ಕಲ್ಮಷ ಚಿತ್ತವೃತ್ತಿಯ ದೃಢವಾದ ನಂಬಿಕೆಯೆ ಕಾರಣವೆಂದು ಮಾರುತಿರಾಯನ ಸಂಪೂರ್ಣಾನುಗ್ರಹಕ್ಕೆ ಪಾತ್ರನಾದ ಪುತ್ರನನ್ನು ಆಲಿಂಗಿಸಿ ಮಾರುತಿಯನ್ನು ನಾನಾ ವಿಧವಾಗಿ ಸ್ತೋತ್ರ ಮಾಡಿದರು. ಅಂದಿನಿಂದ ಮಧ್ವಪತಿಗೆ ವಿಶೇಷವಾಗಿ ಶಾಸ್ತ್ರಾರ್ಥ ವಿಚಾರಗಳನ್ನೆಲ್ಲಾ ಬೋಧಿಸುತ್ತಾ ಬಂದರು. *

---

* ಈ ಮಧ್ವಪತಿ ರಾಯರೇ ಪುನಃ ವಿಜಯದಾಸರಾಗಿ ಅವತರಿಸಿ ದಾಸರವರಿಂದ, ಸ್ವಪ್ನದಲ್ಲಿ ಉಪದೇಶವನ್ನು ಪಡೆದು. ಲೋಕೋದ್ಧಾರಕಾರ್ಯಮಾಡಿರುತ್ತಾರೆಂತಲೂ, ಮತ್ತು ಇವರು ಸಾಕ್ಷಾತ್ ಭೃಗುಋಷಿ ಅಂಶ ಸಂಭೂತರೆಂತಲೂ ಪ್ರಸಿದ್ಧಿಯುಂಟು. ದಾಸರವರು ತಾವು 4, 75000. ಪದ್ಯಗಳನ್ನು ಮಾಡಿ ಉಳಿದ 25000 ಪದ್ಯಗಳನ್ನು ಇವರಿಂದ ಮಾಡಿಸಿ 500000. ಪೂರ್ಣ ಮಾಡಿಸಿದರೆಂದೂ ಉಂಟು.

## ರಾಷ್ಟ್ರಸೇವಾ.

ದಾಸಾರ್ಯರಿಂದ ಪ್ರಪಂಚಕ್ಕಾದ ಉಪಕಾರಗಳಾವುವೆಂದರೆ? ‡ ಕರ್ನಾಟಕ ಭಾಷಾ ಸೇವೆಯಲ್ಲಿ ಅಗ್ರದೀಕ್ಷೆಯನ್ನು ವಹಿಸಿ, ಪಂಡಿತ ಪಾಮರರುಗಳಿಗೂ ಕರ್ನಾಟಕದಲ್ಲಿ ಲಾಲಿತ್ಯವು ಮನಸ್ಸಿಗೆ ಅಂಟುವಂತೆ ಮಾಡಿ ರಾಷ್ಟ್ರದ ಏಳಿಗೆಗೆ ಅತ್ಯವಶ್ಯವಾದ ಸ್ವಭಾಷಾಭಿಮಾನ ಹುಟ್ಟುವಂತೆ ಮಾಡಿದರು.

ಸಂಗೀತವಿದ್ಯೆಯು ಕೇವಲ ನಟವಿಟರುಗಳಿಗಾಗಿ ಏರ್ಪಟ್ಟಿರುವುದೆಂದೂ ಸಂಗೀತ ಅಭ್ಯಾಸದ ಮಾತು ಹಾಗಿರಲಿ, ಕೇಳುವುದೂ ಕೂಡಾ ಅಯೋಗ್ಯ (ಹರಾಂ)ಎಂದು ನಿಷೇಧಿಸಲ್ಪಟ್ಟಿತ್ತು. ದಾಸರು ಗಾನಲೋಲನಾದ ಭಗವಂತನು ಗಾನದಿಂದಲೇ ಒಲಿಯುವನು. ನಾದವೇ, ಬ್ರಹ್ಮವು, ಶ್ರೀಹರಿಯನ್ನು ಮೆಚ್ಚಿಸಬಹುದಾದ ಬ್ರಹ್ಮವಿದ್ಯೆ ಎಂಬುವ ಗೌರವ ಬುದ್ಧಿಯನ್ನು ಹುಟ್ಟಿಸಿದರು. ಗಾನಶಾಸ್ತ್ರವನ್ನು ಇವರೇ ಪರಿಷ್ಕರಿಸಿ, ಯಾವತ್ತು ಲಕ್ಷಣಗೀತೆಗಳನ್ನೂ ರಚಿಸಿರುವರು. ತಳಹದಿಯನ್ನು ಹಾಕಿದವರೆಂಬುವ ಗುರ್ತಿಗಾಗಿ ಸಂಗೀತಶಾಸ್ತ್ರದ ಪ್ರಥಮ ಪಾಠವಾದ ಪಿಳ್ಳಾರಿ ಗೀತವು ಕನ್ನಡ, ತೆಲುಗು, ಅರವ ದೇಶಗಳಲ್ಲೆಲ್ಲಾ ರೂಢಿಯಲ್ಲಿದೆ. ಹೀಗೆ ಸಂಗೀತವಿದ್ಯೆಗೆ ಬಂದ ದುರ್ದಶೆಯನ್ನು ಹೋಗಲಾಡಿಸಿ ಉದ್ಧರಿಸಿದರು.

ಕೀರ್ತನಪದ್ಧತಿಯನ್ನು ತಿದ್ದುಪಾಡು ಮಾಡಿದರು ಮಾತ್ರವಲ್ಲ. ಇವರನಂತರವೇ, ಇವರನ್ನೇ ಆದರ್ಶವಾಗಿಟ್ಟುಕೊಂಡು, ಮಹಾರಾಷ್ಟ್ರ, ಆಂಧ್ರ, ಅರವ ದೇಶಗಳಲ್ಲಿಯೂ, ಆಯಾಯ ದೇಶಭಕ್ತರುಗಳಾದ ರಾಮದಾಸ, ತುಕಾರಾಮ ಮುಂತಾದ ಮಹನೀಯರುಗಳಿಂದ ಪುನರುಜ್ಜೀವನವಾಯಿತು. ಅಂದಮೇಲೆ ಕರ್ನಾಟಕಕ್ಕೆ ಮಾತ್ರವಲ್ಲ, ಈ ಎಲ್ಲ ದೇಶಗಳಿಗೂ ಬಂಧುಗಳೆಂದರೇನು ಅತಿಶಯೋಕ್ತಿಯಾಗಲಾರದು.

---

‡ ದಾಸರವರಿಂದ ಪ್ರಪಂಚಕ್ಕಾದ ಉಪಕಾರಗಳು ಎಂಬುವ ವಿಷಯದಲ್ಲಿಯೂ, ಕೀರ್ತನ ಪದ್ಧತಿಯ ವಿಷಯದಲ್ಲಿಯೂ, ಈ ಮೊದಲು ಶ್ರೀದೇವರು ನನ್ನ ಮುಖದಿಂದ ಬರೆಯಿಸಿರುವ ಧರ್ಮೋದ್ಧಾರವೆಂಬುವ ಪುಸ್ತಕದಲ್ಲಿ ವಿಶೇಷ ವಿಮರ್ಶೆಮಾಡಿರುವುದರಿಂದ ಇಲ್ಲಿ ಸಂಕ್ಷೇಪವಾಗಿ ವಿವರಿಸುತ್ತೇನೆ.

ಜಾತಿದ್ವೇಷ, ಮತದ್ವೇಷಗಳನ್ನು ಪರಿಹರಿಸಿದರು. ಭಗವಂತನು ಎಲ್ಲರಿಗೂ ಬೇಕಾದವನು. ಭಗವಂತನಿಗೆ ಎಲ್ಲರೂ ಬೇಕಾದವರು. ಆದುದರಿಂದ ಯಾರನ್ನೂ ತುಚ್ಛೀಕರಿಸಬಾರದೆಂಬುದಕ್ಕೆ ಪಂಚಮರಲ್ಲಿಯೂ ತಮಗಿರುವ ಸಹಾನುಭೂತಿಯನ್ನು ವ್ಯಕ್ತಪಡಿಸಿರುವರು.

ಸಕಲ ಶಾಸ್ತ್ರಾರ್ಥಗಳನ್ನೂ ಬ್ರಹ್ಮಾನಂದದಾಯಕವಾದ ಸಂಗೀತ ರೂಪದಿಂದ ಪಾಮರರಿಗೂ ಅರ್ಥವಾಗುವಂತೆ ತಿಳಿಗನ್ನಡದಲ್ಲಿ ಹಾಡಿತೋರಿಸಿರುವರು. ಇದರಿಂದ ಭಕ್ತಿಮಾರ್ಗಾವಲಂಬಿಗಳಾಗಿ ಭಗವದನುಗ್ರಹರೂಪವಾದ ಶಾಶ್ವತ ಸುಖಸಂಪತ್ತೆನಿಸಿದ ಆತ್ಮಶ್ರೇಯಸ್ಸುಂಟಾಗುವ ಮಾರ್ಗದರ್ಶಕರಾದರು. ದಾಸರವರು ರಚಿಸಿದ್ದು 4, 75000. ಕೀರ್ತನೆಗಳೆಂದು ವಿಜಯದಾಸರು ಅಪ್ಪಣೆ ಕೊಡಿಸಿರುತ್ತಾರೆ. ನಮ್ಮ ದುರ್ದೈವದಿಂದ ಅನೇಕ ಕೀರ್ತನೆಗಳು ಖಿಲವಾಗಿ ಕೆಲವು ಮಾತ್ರ ರೂಢಿಯಲ್ಲಿದೆ. ದಾಸರವರು ಸುಮಾರು ಅರ್ಧ ಶತಮಾನಗಳ ಕಾಲ ದೇಶ ಸಂಚಾರ ಮಾಡಿ, ಅನೇಕರಿಗೆ ತತ್ತ್ವೋಪದೇಶ ಮಾಡಿರುತ್ತಾರೆ. ಆಗ್ಯೆ ಅನೇಕರು ಇವರಿಗೆ ಶಿಷ್ಯರಾದರು

ಎಲ್ಲೆಲ್ಲಿಯೂ ತರ್ಕ, ವ್ಯಾಕರಣಾದಿ ವಿದ್ಯಾವ್ಯಾಸಂಗ ಮಾಡಿ ವಿದ್ಯಾಗರ್ವಿತರಾಗಿ ವಾದದಲ್ಲಿ ಒಬ್ಬರನ್ನೊಬ್ಬರು ಗೆಲ್ಲುತ್ತಾ, ನಾನು ವಿದ್ವಾಂಸ ತಾನು ವಿದ್ವಾಂಸನೆಂದು ರಾಗ ದ್ವೇಷಾದಿಗಳಿಂದ ಕೂಡಿದವರಾಗಿದ್ದರು ದಾಸರವರು ಒಬ್ಬರಿಗೊಬ್ಬರು ಸಹಾನುಭೂತಿಯಿಲ್ಲದೆ ಕಾದಾಡುವುದು ಸರ್ವಥಾ ನ್ಯಾಯವಲ್ಲವೆಂದು ಅಂಥವರುಗಳೂ ಭಕ್ತಿಮಾರ್ಗಾವಲಂಬಿಗಳಾಗುವಂತೆ ಮಾಡಿದರು, ಕರ್ನಾಟಕವನ್ನೇ, ಕರ್ನಾಟಕ ಮಾತ್ರವೇನು? ಸಂಪೂರ್ಣ ಭರತಖಂಡವನ್ನೇ ಭಕ್ತಿ ಎಂಬುವ ಅಮೃತ ಸಾಗರದಲ್ಲಿಟ್ಟವರೆಂದರೂ ಅತಿಶಯೋಕ್ತಿಯಾಗಲಾರದು.

## ನಿತ್ಯ ಸಂತೋಷ.

ಹೀಗೆ ದಾಸರವರು ತಮ್ಮ ಜೀವಿತ ಕಾಲವನ್ನೆಲ್ಲಾ ಪ್ರಪಂಚದ ಹಿತಕ್ಕಾಗಿಯೇ ಅರ್ಪಿಸಿ, ತಾವು ಮರ್ತ್ಯಲೋಕದಲ್ಲಿ ಪಾರ್ಥಿವ ದೇಹದಿಂದ ಮಾಡಬೇಕಾದ ಶ್ರೀಹರಿಯ ಸೇವೆಯನ್ನೆಲ್ಲಾ ಮುಗಿಸಿಕೊಂಡು, ನಿರಂತರದಲ್ಲಿ ದಿವ್ಯದೇಹದಿಂದ ಭಗವಂತನ ಸೇವೆಯಿಂದ ಕೃತಾರ್ಥರಾಗಲು ಅಕುಂಠಿತವಾ

ವೈಕುಂಠಲೋಕವನ್ನು ಕುರಿತು. (ಕ್ರಿಸ್ತಶಕ. ೧೭ನೆಯ ಶತಮಾನ) ರಕ್ತಾಕ್ಷಿ ನಾಮ ಸಂ|| ಪುಷ್ಯ ಬ. ೩೦ ಶನಿವಾರ ಪ್ರಾತಃಕಾಲ ಶ್ರೀಮನ್ನಾರಾಯಣನ ಸನ್ನಿಧಿಗೆ ಪ್ರಯಾಣ ಮಾಡಿದರು.

॥ ಶ್ರೀಕೃಷ್ಣಾರ್ಪಣಮಸ್ತು ॥

ಶ್ರೀಪುರಂದರಗುರುವಂತರ್ಗತ
ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಪಾಂಡುರಂಗ ವಿಟ್ಠಲಾತ್ಮಕ
ಶ್ರೀಮಧ್ವಪತೇ ಶ್ರೀಗೋಪಾಲಕೃಷ್ಣ ಪ್ರೀಯತಾಂ

॥ ಹರಿಃ ಓಂ ॥

ಈ ಪುಸ್ತಕವು ಪಾವಂಜೆ ಗುರುರಾವ್, ಇವರ ಉಡುಪಿ ಶ್ರೀಕೃಷ್ಣಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟು, ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಿಂದ ಪ್ರಕಟಿಸಲ್ಪಟ್ಟಿತು. ಶಾ. ಶಕ ೧೮೪೭. 1925.

## ಧರ್ಮೋದ್ಧಾರ.

ಈ ಪುಸ್ತಕದಲ್ಲಿ ಸೃಷ್ಟ್ಯಾದಿಯಿಂದಲೂ, ನಮ್ಮ ಆರ್ಯರಿಗೂ, ಆರ್ಯಧರ್ಮಕ್ಕೂ ಯಾವ ಯಾವ ವಿಧದಲ್ಲಿ ವಿಘ್ನಗಳು ಬಂದೊದಗಿದವು, ಅಂತಹ ಗಂಡಾಂತರ ಸಮಯಗಳಲ್ಲಿಯೂ ನಮ್ಮ ಆರ್ಯರು ಧರ್ಮವನ್ನು ಬಿಡದೆ ಹೇಗೆ ಕಾಪಾಡಿಕೊಂಡರು; ಮತ್ತು ಭಗವಂತನು ಎಂದೆಂದಿಗೂ ಧರ್ಮಾತ್ಮರಿಗೂ, ಧರ್ಮಗಳಿಗೂ ವಿಘ್ನಗಳು ಬಂದಾಗ ಹೇಗೆ ಬಿಡದೆ ಕಾಪಾಡುವನು ಇವೇ ಮುಂತಾದ ವಿಷಯಗಳನ್ನು, ಆಬಾಲವೃದ್ಧರಿಗೂ ಮನಸ್ಸಿನ ಮೇಲೆ ಪ್ರತಿಬಿಂಬಿಸುವಂತೆ ತಿಳಿಗನ್ನಡದಲ್ಲಿ ಬಹು ಸುಲಭಶೈಲಿಯಿಂದ ರಚಿಸಿರುತ್ತದೆ. ಶಾಲಾ ವಿದ್ಯಾರ್ಥಿಗಳಿಗೂ ಕೂಡ ಇದು ಅತ್ಯವಶ್ಯವಾಗಿರುತ್ತದೆ.

**ಬೆಲೆ: ೦—೪—೦.**

## ಶ್ರೀಮನ್ಮಧ್ವಾಚಾರ್ಯರವರ ಸಂಕ್ಷಿಪ್ತಚರಿತ್ರೆ.

ಇದರಲ್ಲಿ ಆಚಾರ್ಯರ ಅವತಾರದ ಮಹತ್ಕಾರ್ಯಗಳ ವಿವರವನ್ನು ಅತಿ ಸೂಕ್ಷ್ಮವಾಗಿ ಸಂಪೂರ್ಣವಾಗಿ ತಿಳಿಯುವಂತೆ ವಿರಚಿಸಿಯದೆ.

**ಬೆಲೆ: ೦—೨—೦.**

## ರಾಘವೇಂದ್ರಗುರುಭಜನ.

ಭಜನರಾಮಾಯಣದಂತೆ ಸುಲಭಮಟ್ಟನಿಂದ ಚಿಕ್ಕ ಬಾಲಕರಿಗೂ ಕೂಡ ಹೇಳಲು ಅನುಕೂಲಿಸುವಂತೆ ರಚಿಸಿದೆ.

**ಬೆಲೆ: ೦—೦—೬.**

ಪಾವಂಜೆ ಗುರುರಾವ್,

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ, **ಉಡುಪಿ.**